ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ) ಸಿನ್ : **U85110KA2004SGC001959**

ನೊಂದಾಯಿತ ಕಛೇರಿ : ಹೊೈಗೆಬಜಾರ್, ಮಂಗಳೂರು – 575 001.

THE KARNATAKA FISHERIES DEVELOPMENT CORPORATION LTD.

(A Government of Karnataka Undertaking) (CIN : U85110KA2004SGC001959)

Regd. Office : HOIGE BAZAR, MANGALORE - 575 001

ಐವತ್ತೊಂದನೇ ವಾರ್ಷಿಕ ವರದಿ

ಮತ್ತು

ದಿನಾಂಕ 31–03–2021ರಂದು ಅಂತ್ಯಗೊಳ್ಳುವ ವರ್ಷದ ಲೆಕ್ಕಪತ್ರಗಳು

01–04–2020 ರಿಂದ 31–03–2021

51st ANNUAL REPORT

& Accounts for the period ended 31-03-2021

(01-04-2020 to 31-03-2021)

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟ ಸಂಸ್ಥೆ) (CIN: U85110KA2004SGC001959)

ನೊಂದಾಯಿತ ಕಛೇರಿ : ಹೊೈಗೆಬಜಾರ್, ಮಂಗಳೂರು – 575 001.

E-mail : kfdcixe@yahoo.com
GSTIN : 29AABCK4713E1ZR
PAN : AABCK4713E
Website : www.kfdcfish.com

ದೂರವಾಣಿ : (ಕಛೇರಿ) 0824 - 2421281 -2
2424312 (Direct)
ಫ್ಯಾಕ್ಸ್ : 0824 - 2424560

ನಿಗಮದ ಶಾಖೆಗಳು

ಮಂಗಳೂರು ಶಾಖೆ, ನ್ಯೂ ಸೌತ್‌ವಾರ್ಫ್, ಮೀನುಗಾರಿಕಾ ಬಂದರು, ಮಂಗಳೂರು	(0824)	2427020
ಮಲ್ಪೆ ಶಾಖೆ, ಮೀನುಗಾರಿಕಾ ಬಂದರು, ಮಲ್ಪೆ	(0820)	2537611/2538770
ಗಂಗೊಳ್ಳಿ ಶಾಖೆ, ಮೀನುಗಾರಿಕಾ ಬಂದರು, ಗಂಗೊಳ್ಳಿ	(08254)	298789
ಭಟ್ಕಳ ಶಾಖೆ, ಭಟ್ಕಳ	(08385)	226484
ಹೊನ್ನಾವರ ಶಾಖೆ, ಮೀನುಗಾರಿಕಾ ಬಂದರು, ಹೊನ್ನಾವರ	(08387)	230388
ತದಡಿ ಶಾಖೆ, ಮೀನುಗಾರಿಕಾ ಬಂದರು, ತದಡಿ	(08386)	256020
ಕಾರವಾರ ಶಾಖೆ, ಬೈತಕೋಲ್, ಕಾರವಾರ	(08382	221469

ಹವಾ ನಿಯಂತ್ರಿತ "ಮತ್ಸ್ಯದರ್ಶಿನಿ" ಮೀನು ಮಾರಾಟ ಮಳಿಗೆ/ಉಪಹಾರ ಗೃಹಗಳು

ಕಬ್ಬನ್ ಪಾರ್ಕ್, ಬೆಂಗಳೂರು	(080)	22355129/22342348
ರಾಮಮೂರ್ತಿನಗರ, ಬೆಂಗಳೂರು		9611022114
ನ್ಯೂ ಟೌನ್, ಯಲಹಂಕ, ಬೆಂಗಳೂರು		9448346082
ಕುವೆಂಪು ನಗರ, ತುಮಕೂರು	(08162)	251232
ಕೋರ್ಟ್ ಸರ್ಕಲ್, ಕೋಲಾರ	(08152)	220200
ಮುಳಬಾಗಿಲು, ಕೋಲಾರ		9611357516
ಸಿದ್ದಲಿಂಗಪುರ, ಮೈಸೂರು		9980531452
ಕುವೆಂಪುನಗರ, ಮೈಸೂರು	(08212)	410408
ಶೀತಲಾಗಾರ ಸಂಕೀರ್ಣ FRIC ಹೆಬ್ಬಾಳ		9004035654
ವಿನೋಭ ನಗರ, ಶಿವಮೊಗ್ಗ	(08182)	265100
ಬಿ.ಹೆಚ್. ರಸ್ತೆ, ಶಿವಮೊಗ್ಗ	(08182)	226622
ಬಸ್ ನಿಲ್ದಾಣ ಕಟ್ಟಡ, ತೀರ್ಥಹಳ್ಳಿ		6364750614
ಸಾಲಗಾಮೆ, ಮುಖ್ಯರಸ್ತೆ, ಹಾಸನ	(08172)	245247
ಮ್ಯಾನ್ಸ್ ಕಂಪೌಂಡ್ ರಸ್ತೆ, ಮಡಿಕೇರಿ		6364750614
ಗಾಂಧಿನಗರ, ಸುಳ್ಯ		7795026916
ಬೊಳುವಾರ್, ಪುತ್ತೂರು		9686695679
ಚಿಲಿಂಬಿ, ಮಂಗಳೂರು	(0824)	2454140
ಮೊಬೈಲ್ ಮತ್ಸ್ಯದರ್ಶಿನಿ, ಮಂಗಳೂರು		8050113406
ಮೊಬೈಲ್ ಮೀನು ಮಾರಾಟ ವಾಹನ, ಬೆಂಗಳೂರು		9611022114
ಮೀನುಗಾರಿಕೆ ಉಪನಿರ್ದೇಶಕರ ಕಛೇರಿ, ಹೊಸಪೇಟೆ ರಸ್ತೆ, ಬಳ್ಳಾರಿ		8762645217

1. ಮುಖಪುಟ :– ಮೀನುಗಾರಿಕೆ ಬಂದರು ಮಂಗಳೂರು ಇದರ ಸಮಗ್ರ ಚಿತ್ರಣ.
2. ಕೊನೆಯ ಪುಟ :– 1) ಸುಸಜ್ಜಿತ ಮೀನು ಮಾರುಕಟ್ಟೆ ನಗರಸಭೆ ಯಾದಗಿರಿ
   2) ಸುಸಜ್ಜಿತ ಮೀನು ಮಾರುಕಟ್ಟೆ ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ.
   3) ಸನ್ಮಾನ್ಯ ಶ್ರೀ ಎಸ್. ಅಂಗಾರ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರಕಾರ ಇವರಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಿರ್ಮಾಣಗೊಂಡಿರುವ ಶೀತಲೀಕೃತ ಮೀನು ಸಾಗಾಟ ವಾಹನಗಳ ಉದ್ಘಾಟನಾ ಸಮಾರಂಭ.
   4) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಿರ್ಮಾಣಗೊಂಡಿರುವ ಶೀತಲೀಕೃತ ಮೀನು ಸಾಗಾಟ ವಾಹನಗಳು

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟ ಸಂಸ್ಥೆ) (CIN: U85110KA2004SGC001959)

ನೊಂದಾಯಿತ ಕಛೇರಿ : ಹೊಯ್ಗೆಬಜಾರ್, ಮಂಗಳೂರು – 575 001.

E-mail : kfdcixe@yahoo.com
GSTIN : 29AABCK4713E1ZR
PAN : AABCK4713E
Website : www.kfdcfish.com

ದೂರವಾಣಿ : (ಕಛೇರಿ) 0824 - 2421281 -2
2424312 (Direct)
ಫ್ಯಾಕ್ಸ್ : 0824 - 2424560

- ಮೀನುಗಾರಿಕೆ ರಂಗದಲ್ಲಿ 51 ವರ್ಷಗಳ ಸಾರ್ಥಕ ಸೇವೆ.
- ಮೀನುಗಾರರಿಗೂ, ರಫ್ತುದಾರರಿಗೂ ಮೀನು ಸಂಸ್ಕರಣಕ್ಕೆ ಅವಶ್ಯವಿರುವ ಮೂಲಭೂತ ಸೌಲಭ್ಯ ಒದಗಿಸುವುದು.
- ತಾಜಾ ಮೀನು, ಶೀತಲೀಕೃತ ಮೀನು, ಮೀನು ಹುಡಿ, ಮೀನಿನ ಎಣ್ಣೆ, ಮಂಜುಗಡ್ಡೆ ಇತ್ಯಾದಿ ವೈವಿಧ್ಯಮಯ ಮೀನು ಉತ್ಪನ್ನಗಳ ಮಾರಾಟ.
- "ಶೀತಲ ಸರಪಣಿಯ" ಮೂಲಕ ಯೋಗ್ಯ ದರದಲ್ಲಿ ಉತ್ತಮ ಗುಣಮಟ್ಟದ ಮೀನು ಉಪಹಾರ ಗೃಹಗಳ ಸ್ಥಾಪನೆ
- ಸಸಾರಜನಕ ಭರಿತ ಮೀನಿನ ಪ್ರಚಾರಕ್ಕಾಗಿ "ಮತ್ಸ್ಯದರ್ಶಿನಿ" ಮೀನು ಉಪಹಾರ ಗೃಹಗಳ ಸ್ಥಾಪನೆ
- ಪರ್ಸಿನ್ ಬೋಟುಗಳು ಹಿಡಿದ ಮೀನಿಗೆ ಸುವ್ಯವಸ್ಥಿತ ಮಾರಾಟ ವ್ಯವಸ್ಥೆ
- ಮೀನುಗಾರಿಕಾ ಬೋಟುಗಳಿಗೆ ಡೀಸಿಲ್ / ಆಯಿಲ್ ಪೂರೈಕೆ
- ಅಲಂಕಾರಿಕಾ ಮೀನಿನ ಮಾರಾಟ ಹಾಗೂ ಅಕ್ವೇರಿಯಮ್ ಮತ್ತು ಪೂರಕ ಸಾಮಾಗ್ರಿಗಳ ಮಾರಾಟ
- ರಾಜ್ಯದ ಮತ್ಸ್ಯಾಶ್ರಯ ಯೋಜನೆ ಅನುಷ್ಠಾನದ ನೋಡಲ್ ಏಜೆನ್ಸಿ
- ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯಿಂದ ರಾಜ್ಯದಲ್ಲಿ ಅನುಷ್ಠಾನಗೊಳ್ಳುವ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣದ ನೋಡಲ್ ಏಜೆನ್ಸಿ.

THE KARNATAKA FISHERIES DEVELOPMENT CORPORATION LTD.

(A Government of Karnataka Undertaking) (CIN : U85110KA2004SGC001959)

Regd. Office : **HOIGE BAZAR, MANAGLORE - 575 001.**

E-mail : kfdcixe@yahoo.com
GSTIN : 29AABCK4713E1ZR
PAN : AABCK4713E
Website : www.kfdcfish.com

Telephone : 0824 - 2421281 -2 Lines
2424312 (Direct)
Fax : 0824 - 2424560

- Providing infrastructure facilities for preservation of fish for fishermen and for exporters.
- Marketing of Fresh Fish, Frozen Fish, Fish Meal, Fish Oil, Ice and other Value Added Fish Products.
- Marketing of Quality Frozen Fish Products at reasonable rates throughout the year under 'Cold Chain' Programme.
- Opening Mathsyadarshini's - Modern Fish Restaurants for popularizing protein rich sea Food.
- Modernizing organized marketing of Purseine Boat Landings.
- Supplying Diesel / Lubricant Oil to the fishing boats
- Production and marketing of Ornamental Fishes, Aquarium and Accessories
- Nodal Agency for implementation of State Mathsyashraya Scheme
- Recognized as nodal Agency of NFDB for construction of Modern Hygienic Fish Markets in Karnataka.


ಸುಸಜ್ಜಿತ ಮೀನು ಮಾರುಕಟ್ಟೆ
ನಗರಸಭೆ ಯಾದಗಿರಿ
①


ಸುಸಜ್ಜಿತ ಮೀನು ಮಾರುಕಟ್ಟೆ
②


ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು
ಸಂಚಾರಿ ಶೀಥಲೀಕರಣ ನಿರೋಧಕ ವಾಹನಗಳ
③


KFDC Ltd.
SEAFOOD PROCESSING & EXPORT PLT
④

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(CIN : U85110KA2004SGC001959)

(ಕರ್ನಾಟಕ ಸರಕಾರದ ಉದ್ಯಮ)

ಹೊೖಗೆ ಬಜಾರ್, ಮಂಗಳೂರು – 575 001.

ನಿರ್ದೇಶಕರ ಮಂಡಳಿ

ಅಧ್ಯಕ್ಷರು : **ಶ್ರೀ ಕೋಟಾ ಶ್ರೀನಿವಾಸ ಪೂಜಾರಿ** (ಡಿನ್ 08578032)
ಮಾನ್ಯ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು (12.09.2019ರಿಂದ 24.11.2020 ರವರೆಗೆ)

ಶ್ರೀ ನಿತಿನ್ ಕುಮಾರ್
(ಡಿನ್ 03398268) (24.11.2020 ರಿಂದ)

ವ್ಯವಸ್ಥಾಪಕ ನಿರ್ದೇಶಕರು : **ಶ್ರೀ ಎಂ.ಎಲ್. ದೊಡ್ಡಮನಿ** (ಡಿನ್ 07998781)
ಅಪರ ನಿರ್ದೇಶಕರು, ಮೀನುಗಾರಿಕಾ ಇಲಾಖೆ

ನಿರ್ದೇಶಕರು :

ಶ್ರೀ ರಾಮಕೃಷ್ಣ (ಡಿನ್ 08345376) (19.12.2018ರಿಂದ 29.08.2020ರ ವರೆಗೆ) ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು

ಶ್ರೀ ರಾಮಾಚಾರ್ಯ ಪುರಾಣಿಕ್ (ಡಿನ್ 08956093)
(29.8.2020ರಿಂದ) ಮೀನುಗಾರಿಕಾ ನಿರ್ದೇಶಕರು, ಬೆಂಗಳೂರು

ಶ್ರೀಮತಿ ಆರ್. ಲೀಲಾವತಿ (ಡಿನ್ 08053877)
(7.12.2017ರಿಂದ 17.10.2020 ರವರೆಗೆ)
ಅಪರ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ

ಶ್ರೀಮತಿ ಶಕುಂತಲಾ ಚೌಗಲ (ಡಿನ್ 08955638)
(17.10.2020 ರಿಂದ 24.03.2021 ರವರೆಗೆ)
ಉಪಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ

ಶ್ರೀ. ಶಂಕರಗೌಡ ಸಿ. ದೊಡ್ಡಮನಿ (ಡಿನ್ 09242823)
(24.03.2021 ರಿಂದ) ಸರ್ಕಾರದ ಜಂಟಿಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ

ಶ್ರೀಮತಿ ಪದ್ಮಾವತಿ (ಡಿನ್ 07262520)
ಸರ್ಕಾರದ ವಿಶೇಷ ಕಾರ್ಯದರ್ಶಿ, ಆರ್ಥಿಕ ಇಲಾಖೆ

ಶ್ರೀಮತಿ ಸಿ. ಹೇಮಲತ (ಡಿನ್ 08569406)
ಸರಕಾರದ ಉಪ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ

ಶ್ರೀ ಸಂದೀಪ್ ಕುಂದರ್ (ಡಿನ್ 09134778) (15.03.2021 ರಿಂದ)

ಶ್ರೀ ಬಿ. ರಾಜಪ್ಪ (ಡಿನ್ 09134606) (15.03.2021 ರಿಂದ)

ಶ್ರೀ ಜೆ.ಎ. ಕೃಷ್ಣಮೂರ್ತಿ (ಡಿನ್ 09134757) (15.03.2021 ರಿಂದ)

ಶ್ರೀ ಬಾರಕೇರ್ ಗಡ್ಡಪ್ಪ (ಡಿನ್ 09164135) (15.03.2021 ರಿಂದ)

ಶ್ರೀ ರಾಜೇಂದ್ರ ನಾಯ್ಕ (ಡಿನ್ 07670354) (15.03.2021 ರಿಂದ)

ಕಂಪೆನಿ ಕಾರ್ಯದರ್ಶಿ: **ಶ್ರೀ. ಪಿ.ವಿ. ರೈ** (ರಿಟೈನರ್‌ಶಿಪ್)
ಲೆಕ್ಕ ಪತ್ರ ಪರಿಶೋಧಕರು : **ಮೆ। ಕಾಮತ್ & ರಾವ್,**
ಚಾರ್ಟರ್ಡ್ ಎಕೌಂಟೆಂಟ್ಸ್ ಕರಂಗಲ್ಪಾಡಿ, ಮಂಗಳೂರು–575003

ಬ್ಯಾಂಕ್‌ಗಳು: **ಸಿಂಡಿಕೇಟ್ ಬ್ಯಾಂಕ್,** ಹಂಪನಕಟ್ಟ ಮಂಗಳೂರು
ಕೆನರಾ ಬ್ಯಾಂಕ್, ಹೊೖಗೆ ಬಝಾರ್,ಮಂಗಳೂರು
ಯೂನಿಯನ್ ಬ್ಯಾಂಕ್, ಪಾಂಡೇಶ್ವರ ಮಂಗಳೂರು
ಐಸಿಐಸಿಐ ಬ್ಯಾಂಕ್, ಹಂಪನಕಟ್ಟ ಮಂಗಳೂರು
ಹೆಚ್.ಡಿ.ಎಫ್.ಸಿ. ಬ್ಯಾಂಕ್, ಶಿವಭಾಗ್, ಮಂಗಳೂರು
ಐ.ಡಿ.ಬಿ.ಐ. ಬ್ಯಾಂಕ್, ಕಂಕನಾಡಿ, ಮಂಗಳೂರು
ಆಕ್ಸಿಸ್ ಬ್ಯಾಂಕ್, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು
ಕೋಟಕ್ ಮಹೀಂದ್ರ ಬ್ಯಾಂಕ್, ಮಂಗಳೂರು
ಕೆ.ವಿ.ಜಿ. ಬ್ಯಾಂಕ್, ಕರಂಗಲ್ಪಾಡಿ, ಮಂಗಳೂರು
ಸ್ಟೇಟ್ ಬ್ಯಾಂಕ್ ಆಫ್ಇಂಡಿಯಾ, ಪೋರ್ಟ್ ರೋಡ್ ಮಂಗಳೂರು

ನೋಂದಾಯಿತ ಕಛೇರಿ: ಹೊೖಗೆ ಬಝಾರ್, ಮಂಗಳೂರು – 575001

KARNATAKA FISHERIES DEVELOPMENT CORPORATION LTD

(CIN : U85110KA2004SGC001959)

(A Govt of Karnataka Enterprise)

Hoige Bazar, Mangalore-575001

BOARD OF DIRECTORS

Chairman : **MR. KOTA SRINIVASA POOJARY**
(DIN 08578032)Hon'ble Minister for Fisheries, Ports, Inland Water Transport and Muzrai (From 12.09.2019 to 24.11.2020

SRI. NITHIN KUMAR (DIN 03398268) (From 6.10.2017)

Managing Director : **SRI. M. L. DODDAMANI** (DIN 07998781)
Additional Director of Fisheries

Directors :

SRI. RAMAKRISHNA (DIN 08345376)(From 19.12.2018 to 29.8.2020)
Director of Fisheries, Bangalore

SRI. RAMACHARYA (DIN 08956093)(From 29.8.2020,
Director of Fisheries, Bangalore

MRS. R. LEELAVATHI (DIN 08053877) (From 7.12.2017 to 17.10.2020)
Additional Secretary, Animal Husbandry & Fisheries dept

MRS.SHAKUNTHALA CHAUGALA (DIN 08955638) (From 17.10.2020 to 24.03.2021) Additional Secretary, Animal Husbandry&Fisheries dept

MR. SHANKERGOWDA C. DODDAMANI (DIN 09242823)
(From 24.03.2021)Joint Secretary to Govt. Finance Department

MRS. PADMAVATHI (DIN 07262520)
Special Secretary, Finance Department

MRS. C. HEMALATHA (DIN 08569406)
Deputy Secretary, Dept. of Public Enterprises

SRI. SANDEEP KUNDER (DIN 09134778) (From 15.03.2021)

SRI. B. RAJAPPA (DIN 09134606) (From 15.03.2021)

SRI. J.A. KRISHNA MURTHI (DIN 09134757) (From 15.03.2021)

SRI. BARAKER GADAPPA (DIN 09164135) (From 15.03.2021)

SRI. RAJENDRA NAIK (DIN 07670354) (From 15.03.2021)

Company Secretary : **SRI. P. V. RAI** (Retainership)

Auditors : **M/S. KAMATH & RAU,** CHARTERED ACCOUNTANTS,
Karangalpady, Mangalore-575003

Bankers: **SYNDICATE BANK,** Hampankatta, M'lore.
CANARA BANK, Hoige Bazar, Mangalore.
UNION BANK, Pandeshwar, Mangalore.
ICICI, BANK, Hampankatta, Mangalore.
HDFC BANK, Shivabhagh, Mangalore
IDBI BANK, Kankanady, Mangalore
AXIS BANK, Bunts Hostel Circle, Mangalore
KOTAK MAHINDRA BANK, Mangalore
KVG BANK, Mangalore
STATE BANK OF INDIA, Port Road, M'lore
INDIAN OVERSEAS BANK, Hampankatta M'lore.
HDFC BANK, Shivabagh, Mangalore

Registered office: HOIGE BAZAR, MANGALORE-575001

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟ ಸಂಸ್ಥೆ) (CIN : U85110KA2004SGC001959)

ನೊಂದಾಯಿತ ಕಛೇರಿ : ಹೊೖಗೆಬಜಾರ್, ಮಂಗಳೂರು – 575 001.

E-mail : kfdcixe@yahoo.com
GSTIN : 29AABCK4713E1ZR
PAN : AABCK4713E

ದೂರವಾಣಿ : (ಕಛೇರಿ) 0824 - 2421281 -2
2424312 (Direct)
ಫ್ಯಾಕ್ಸ್ : 0824 - 2424560

ಶೇರುದಾರರಿಗೆ ವಾರ್ಷಿಕ ಸಭೆಯ ನೋಟೀಸ್

ಕರ್ನಾಟಕ ಮೀನುಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಇದರ 51ನೇ ವಾರ್ಷಿಕ ಮಹಾಸಭೆಯು ಶುಕ್ರವಾರ, ದಿನಾಂಕ 26–11–2021 ರಂದು ಮಧ್ಯಾಹ್ನ ಗಂಟೆ 12.30ಕ್ಕೆ ಕೊಠಡಿ ಸಂಖ್ಯೆ: 02, ನ್ಯೂ ಕುಮಾರ ಕೃಪ ಸರಕಾರಿ ಅತಿಥಿ ಗೃಹ, 5ನೇ ಮೈನ್, ಕುಮಾರ ಕೃಪಾ ರೋಡ್, ಗೋಲ್ಫ್ ಕ್ಲಬ್ ಎದುರು, ಬೆಂಗಳೂರು–560 001 ಇಲ್ಲಿ ಕರೆಯಲಾಗಿದೆ.

ಸಾಮಾನ್ಯ ವ್ಯವಹಾರ :–

1. 31ನೇ ಮಾರ್ಚ್ 2021 ರಂದು ಅಂತ್ಯವಾಗುವ ವರ್ಷದ ಆಡಿಟ್ ಮಾಡಲಾದ ಸ್ಥಿತಿ ವಿವರಣಾ ಪಟ್ಟಿ ಮತ್ತು ಲಾಭ–ನಷ್ಟಗಳ ತಖ್ತೆ ಹಾಗೂ ನಿರ್ದೇಶಕರ ವರದಿ, ಲೆಕ್ಕ ಪತ್ರ ಪರಿಶೋಧಕರ ವರದಿ ಮತ್ತು ಅವುಗಳ ಮೇಲೆ ಕಂಪ್ಟ್ರೋಲರ್ ಹಾಗೂ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ವರದಿಯನ್ನು ಒಪ್ಪಿಕೊಳ್ಳುವುದು ಮತ್ತು ಅಳವಡಿಸಿಕೊಳ್ಳುವುದು.
2. ನಿಗಮದ ಲೆಕ್ಕ ಪರಿಶೋಧಕರಾಗಿ ಮಹಾಲೇಖಪಾಲಕರು, ನವದೆಹಲಿ ಇವರಿಂದ ನೇಮಕಗೊಂಡ ಲೆಕ್ಕ ಪರಿಶೋಧಕರಿಗೆ ಸಂಭಾವನೆ ನೀಡುವ ಕುರಿತು.

ಆಡಳಿತ ಮಂಡಳಿಯ ಆದೇಶದ ಮೇರೆಗೆ

ಸಹಿ/–
(ಶ್ರೀ ಎಂ.ಎಲ್. ದೊಡ್ಡಮನಿ)
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಮಂಗಳೂರು
ದಿನಾಂಕ : 03–11–2021

ಸೂಚನೆ :–

1. ಮಹಾಸಭೆಗೆ ಹಾಜರಾಗುವ ಮತ್ತು ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರು ತಮ್ಮ ಬದಲಿಗೆ ಪ್ರತಿನಿಧಿಯನ್ನು ಮಹಾಸಭೆಗೆ ಕಳುಹಿಸಬಹುದು. ಈ ಪ್ರತಿನಿಧಿಯು ನಿಗಮದ ಸದಸ್ಯರಾಗಬೇಕೆಂಬ ಷರತ್ತೇನಿಲ್ಲ.
2. ನಿಗಮದ 29ನೇ ಮಹಾಸಭೆಯಲ್ಲಿ ನಿರ್ಧರಿಸಿದಂತೆ ಮಹಾಸಭೆಯನ್ನು ನೋಂದಾಯಿತ ಕಛೇರಿಯಲ್ಲಿ ಕರೆಯುವ ಬದಲಾಗಿ ಬೆಂಗಳೂರಿನಲ್ಲಿ ಕರೆಯಲಾಗಿದೆ.

**** ವಿಶೇಷ ಸೂಚನೆ:–***

ದಿನಾಂಕ 26.11.2021ನೇ ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ಕರೆದ ಮಹಾಸಭೆಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಚುನಾವಣೆಯ ನೀತಿ ಸಂಹಿತೆ ಜ್ಯಾರಿಗೊಳಿಸಿರುವುದರಿಂದ ಮುಂದೂಡಿದ್ದು, ಸದ್ರಿ ಸಭೆಯನ್ನು ದಿನಾಂಕ 18.12.2021 ನೇ ಶನಿವಾರ, ಅಪರಾಹ್ನ 3.30 ಗಂಟೆಗೆ ಮೇಲಿನ ಉಲ್ಲೇಖಿತ ಸ್ಥಳದಲ್ಲಿ ರಿಜಿಸ್ಟ್ರಾರ್ ಆಫ್ ಕಂಪೆನೀಸ್, ಬೆಂಗಳೂರು ಇವರ ಅನುಮತಿಯೊಂದಿಗೆ ಕರೆಯಲಾಗಿದೆ.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)

ನೋಂದಾಯಿತ ಕಚೇರಿ: ಹೊಗೆ ಬಜಾರ್, ಮಂಗಳೂರು – 575 001.

E-Mail: kfdcixe@yahoo.com **ದೂರವಾಣಿ (ಕಛೇರಿ):– 2421281/ 82**

CIN: U85110KA2004SGC001959 **ಫ್ಯಾಕ್ಸ್ :– (0824) 2424560**

ನಿರ್ದೇಶಕರ ವರದಿ

ಮಹನೀಯರೇ,

ನಿಗಮದ 1–4–2020 ರಿಂದ 31–03–2021ರ ಅವಧಿಯ ವ್ಯವಹಾರದ ಕುರಿತ 51ನೇ ವಾರ್ಷಿಕ ವರದಿಯನ್ನು, ಪರಿಶೋಧಿತ ಲೆಕ್ಕ ಪತ್ರಗಳು, ಲೆಕ್ಕ ಪರಿಶೋಧಕರ ವರದಿ ಹಾಗೂ 2013ರ ಕಂಪೆನಿ ಕಾಯ್ದೆಯ ಸೆಕ್ಷನ್ 143(6)(ಬಿ)ರ ಪ್ರಕಾರ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ವ್ಯಾಖ್ಯಾನಗಳೊಂದಿಗೆ ನಿಮ್ಮ ಮುಂದಿಡಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ.

ಆರ್ಥಿಕ ಫಲಿತಾಂಶಗಳು:–

ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಹಿಂದಿನ ವರ್ಷದಲ್ಲಿ ಬಿಡುಗಡೆ ಮಾಡಿದ ಧನಸಹಾಯವನ್ನು ಉಪಯೋಗಿಸಿಕೊಂಡು ಯೋಜನೆಯನ್ನು ಕಾರ್ಯಗತಗೊಳಿಸುವುದನ್ನು ಮುಂದುವರಿಸಿದೆ. ನಿಗಮವು ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್. ಪುರ, ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಉಡುಪಿ ಜಿಲ್ಲೆಯ ಸಾಸ್ತಾನದಲ್ಲಿ ಮೀನುಗಾರಿಕೆ ಇಲಾಖೆ, ಎನ್.ಎಫ್.ಡಿ.ಬಿ., ಮತ್ತು ನಬಾರ್ಡಿನ ಆರ್.ಐ.ಡಿ.ಎಫ್. ಯೋಜನೆಯ ಆರ್ಥಿಕ ನೆರವಿನೊಂದಿಗೆ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣವನ್ನು ಪ್ರಾರಂಭಿಸಿದ್ದು, ಚಿಕ್ಕಮಗಳೂರು ಜಿಲ್ಲೆಯ ಎನ್. ಆರ್.ಪುರ ಮತ್ತು ಶಿವಮೊಗ್ಗ ಜಿಲ್ಲೆಯ ಸಾಗರದ ಸುಸಜ್ಜಿತ ಮೀನು ಮಾರುಕಟ್ಟೆ ಕೆಲಸವು ಪ್ರಗತಿಯಲ್ಲಿದೆ. ಉಡುಪಿ ಜಿಲ್ಲೆಯ ಸಾಸ್ತಾನ ಮೀನು ಮಾರುಕಟ್ಟೆಯನ್ನು ಫಲಾನುಭವಿಗಳ ಉಪಯೋಗಕ್ಕಾಗಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ.

ಭಾರತ ಸರ್ಕಾರದ ವಾಣಿಜ್ಯ ಮಂತ್ರಾಲಯದ ಟೈಸ್ ಯೋಜನೆಯಡಿ ಮತ್ತು ಕರ್ನಾಟಕ ಸರ್ಕಾರದ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ಆರ್ಥಿಕ ಸಹಾಯದೊಂದಿಗೆ ಬೆಂಗಳೂರಿನ ವಿಶ್ವೇಶ್ವರಯ್ಯ ಟ್ರೇಡ್ ಪ್ರಮೋಷನ್ ಸೆಂಟರಿನ ಮೂಲಕ ಉತ್ತರ ಕನ್ನಡ ಜಿಲ್ಲೆಯ ತದಡಿ ಮೀನುಗಾರಿಕೆ ಬಂದರಿನಲ್ಲಿರುವ ನಿಗಮದ ಮೀನು ಸಂಸ್ಕರಣಾ ಸ್ಥಾವರವನ್ನು ಮೆರೈನ್ ಎಕ್ಸ್‌ಪೋರ್ಟ್ ಯೂನಿಟ್ ನವೀಕರಿಸಲು ರೂ.13.34 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿದೆ. ಈ ಯೋಜನೆಗೆ ಕೇಂದ್ರ ಸರ್ಕಾರವು ರೂ.5.00 ಕೋಟಿ ಹಾಗೂ ರಾಜ್ಯ ಸರ್ಕಾರವು ರೂ.5.00 ಕೋಟಿಗಳನ್ನು ಮಂಜೂರು ಮಾಡಿದ್ದು, ಉಳಿಕೆ ಮೊತ್ತ ರೂ.3.34 ಕೋಟಿ ದುಡಿಮೆ ಬಂಡವಾಳವನ್ನು ನಿಗಮವು ಭರಿಸಲಿದೆ. ಮಾತ್ರವಲ್ಲದೆ ಸದ್ರಿ ಯೋಜನೆಯ ಹೆಚ್ಚುವರಿ ಯೋಜನಾ ವೆಚ್ಚ ರೂ.2.38 ಕೋಟಿಯನ್ನು ನಿಗಮವು ಭರಿಸಬೇಕಾಗಿದೆ. ವರದಿ ವರ್ಷದಲ್ಲಿ ಸದ್ರಿಯೋಜನೆ ಬಗ್ಗೆ ಕೇಂದ್ರ ಸರ್ಕಾರದಿಂದ ರೂ.4.65 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.4.91 ಕೋಟಿ ಮತ್ತು ನಿಗಮದಿಂದ ರೂ.157.60 ಲಕ್ಷ ಒಟ್ಟು ರೂ.11.14 ಕೋಟಿ ಹಣ ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ಈ ಕಾಮಗಾರಿಯ ಬಾಬ್ತು ರೂ.1.23 ಕೋಟಿ ಪಾವತಿಗೆ ಬಾಕಿ ಇರುತ್ತದೆ. ಮೀನು ಸಂಸ್ಕರಣಾ ಸ್ಥಾವರದ ಮೆರೈನ್ ಎಕ್ಸ್‌ಪೋರ್ಟ್ ಯೂನಿಟ್ ನವೀಕರಣ ಕಾಮಗಾರಿ ಪೂರ್ಣಗೊಂಡಿದ್ದು ಐರೋಪ್ಯ ಒಕ್ಕೂಟದ ನಿಯಮಾವಳಿಯಂತೆ ರಫ್ತು ಪರವಾನಿಗೆ ಪಡೆಯುವ ಬಗ್ಗೆ ಕ್ರಮ ಜರುಗಿಸಲಾಗಿದೆ.

ವರದಿ ವರ್ಷದ ಒಟ್ಟು ಮತ್ತು ನಿವ್ವಳ ಲಾಭ/ನಷ್ಟವನ್ನು ಹಿಂದಿನ ವರ್ಷದ ಅಂಕಿ ಅಂಶಗಳ ಹೋಲಿಕೆಯೊಂದಿಗೆ ಈ ಕೆಳಗೆ ನೀಡಲಾಗಿದೆ.

(ಮೊತ್ತ ಲಕ್ಷಗಳಲ್ಲಿ)

ವಿವರಗಳು	2020–2021	2019–2020
ಸವಕಳಿ, ಬಡ್ಡಿ ಮತ್ತು ಹಿಂದಿನ ಅವಧಿಯ ಹೊಂದಾಣಿಕೆ ಮತ್ತು ಆದಾಯ ತೆರಿಗೆ ಅನುವುಗಳನ್ನು ಕಳೆಯುವ ಮುಂಚಿತ ಒಟ್ಟು ಲಾಭ	(+) 225.43	(+) 206.28
ಸವಕಳಿ ಮತ್ತು ಬಡ್ಡಿಯ ನಂತರ ಲಾಭ	(+) 172.57	(+) 173.08
ಸವಕಳಿ, ಬಡ್ಡಿ ಹಿಂದಿನ ಅವಧಿಯ ಹೊಂದಾಣಿಕೆ ಮತ್ತು ಆದಾಯ ತೆರಿಗೆ ಅನುವುಗಳನ್ನು ಕಳೆದ ನಂತರ ನಿವ್ವಳ ಲಾಭ	(+) 124.23	(+) 126.12

ವರದಿ ಸಾಲಿನಲ್ಲಿ ನಿಗಮವು ರೂ.1.24 ಕೋಟಿ ಲಾಭ ಗಳಿಸಿದ್ದು, ಹಿಂದಿನ ಸಾಲಿನಲ್ಲಿ ರೂ.1.26 ಕೋಟಿ ಲಾಭಗಳಿಸಲಾಗಿರುತ್ತದೆ.

ಡೀಸೆಲ್ ಮತ್ತು ಆಯಿಲ್ ಮಾರಾಟದ ಆದಾಯ:–

ಮೀನುಗಾರಿಕಾ ಬೋಟುಗಳಿಗೆ ಮಾರಾಟ ಕರರಹಿತ ಡೀಸಿಲ್ ಪೂರೈಸುವುದು ನಿಗಮದ ಬೃಹತ್ ಚಟುವಟಿಕೆಯಾಗಿದ್ದು, ಇದು ನಿಗಮದ ವ್ಯವಹಾರಕ್ಕೆ ಹೆಚ್ಚಿನ ಕೊಡುಗೆ ನೀಡುತ್ತದೆಯಲ್ಲದೆ ನಿಗಮಕ್ಕೆ ಗಣನೀಯವಾದ ಲಾಭವನ್ನು ತಂದು ಕೊಡುತ್ತದೆ. ಮಂಗಳೂರು ಮತ್ತು ಮಲ್ಪೆಯಲ್ಲಿ ಹೆಚ್‌ಪಿಸಿಯ ಗ್ರಾಹಕ ಡೀಸೆಲ್ ಬಂಕ್‌ಗಳಿದ್ದು, ಐಒಸಿ.ಯ ಚಿಲ್ಲರೆ ಮಳಿಗೆಗಳು ಗಂಗೊಳ್ಳಿ, ತದಡಿ ಮತ್ತು ಕಾರವಾರದಲ್ಲಿ ಕಾರ್ಯಚರಿಸುತ್ತಿದೆ. ವರದಿ ವರ್ಷದಲ್ಲಿ ಡೀಸೆಲ್ ಮತ್ತು ಆಯಿಲ್ ಮಾರಾಟದ ಪ್ರಮಾಣ ಮತ್ತು ಅದರಿಂದ ಪಡೆದ ಆದಾಯವನ್ನು ಕಳೆದ ವರ್ಷದ ಅಂಕಿ ಅಂಶಗಳ ಹೋಲಿಕೆಯೊಂದಿಗೆ ಈ ಕೆಳಗೆ ನೀಡಲಾಗಿದೆ.

(ಮೊತ್ತ ಲಕ್ಷಗಳಲ್ಲಿ)

ಘಟಕ	2020–2021		2019–2020	
	ಕಿಲೋ ಲೀಟರುಗಳು	ಮೊತ್ತ	ಕಿಲೋ ಲೀಟರುಗಳು	ಮೊತ್ತ
ಮಂಗಳೂರು	6378	4959.10	11265	7523.23
ಮಲ್ಪೆ	5301	4134.14	6875	4670.72
ಗಂಗೊಳ್ಳಿ	826	639.63	1236	816.75
ತದಡಿ	817	644.54	845	585.15
ಕಾರವಾರ	349	273.59	521	360.65
ಒಟ್ಟು ಮೊತ್ತ	**13671**	**10651.00**	**20742.00**	**13956.50**

ವರದಿ ವರ್ಷದ ಡಿಸೀಲ್ ಮಾರಾಟದಿಂದ ಬಂದ ಆದಾಯವನ್ನು ಹಿಂದಿನ ಸಾಲಿನ ಆದಾಯದೊಂದಿಗೆ ತುಲನೆ ಮಾಡಿದಾಗ ಪ್ರಸ್ತುತ ಸಾಲಿನ ಆದಾಯವು ಕಡಿಮೆಯಾಗಿದ್ದು, ಅದು ಬುಲ್‌ಟ್ರಾಲ್ ಮತ್ತು ಲೈಟ್ ಫಿಶಿಂಗ್ ಮೀನುಗಾರಿಕೆಗೆ ಸರಕಾರ ನಿರ್ಬಂಧ ಹೇರಿರುವುದರಿಂದ ಹಾಗೂ ಕೋವಿಡ್–19 ಸಾಂಕ್ರಾಮಿಕ ರೋಗದ ಪರಿಣಾಮದಿಂದ ಆದಾಯ ಕಡಿಮೆಯಾಗಲು ಕಾರಣವಾಗಿದೆ.

ಪರ್ಸೀನ್ ಬೋಟುಗಳು ಹಿಡಿದ ಮೀನಿನ ಮಾರಾಟ:–

ಮೀನುಗಾರರು ಹಿಡಿದ ಮೀನಿಗೆ ಯೋಗ್ಯ ಬೆಲೆ ದೊರೆಯುವಂತಾಗಲು ಮತ್ತು ಮೀನುಗಾರರು ಮಾರಾಟ ಮಾಡಿದ ಮೀನಿನ ಮೌಲ್ಯವನ್ನು ಸಕಾಲದಲ್ಲಿ ಪಡೆಯುವಂತಾಗಲು ನಿಗಮವು ಪ್ರಥಮ ಬಾರಿಗೆ 1981–1982ರಲ್ಲಿ ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ ಪರ್ಸೀನ್ ಬೋಟುಗಳು ಹಿಡಿದು ತಂದ ಮೀನನ್ನು ಮಾರಾಟ ಮಾಡಲು ಪ್ರಾರಂಭಿಸಿತು. ನಂತರ ಇದನ್ನು ಇತರ ಮೀನುಗಾರಿಕಾ ಕೇಂದ್ರಗಳಿಗೂ ವಿಸ್ತರಿಸಲಾಯಿತು. ಪ್ರಸ್ತುತ ನಿಗಮವು ಉತ್ತರಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರ ಮತ್ತು ತದಡಿಯಲ್ಲಿ ಪರ್ಸೀನ್ ಬೋಟಿನವರು ಹಿಡಿದ ಮೀನನ್ನು ಮಾರಾಟ ಮಾಡುತ್ತಿದೆ.

ವರದಿ ವರ್ಷದಲ್ಲಿ ಮಾರಾಟ ಮಾಡಿದ ಮೀನಿನ ಮೌಲ್ಯ ಮತ್ತು ಗಳಿಸಿದ ಕಮಿಷನ್ ಮೊತ್ತವನ್ನು ಹಿಂದಿನ ವರ್ಷದ ಹೋಲಿಕೆಯೊಡನೆ ಈ ಕೆಳಗೆ ನೀಡಲಾಗಿದೆ.

(ಮೊತ್ತ ಲಕ್ಷಗಳಲ್ಲಿ)

ಘಟಕ	2020–21		2019–2020	
	ಮೀನಿನ ಮೌಲ್ಯ	ಆದಾಯ	ಮೀನಿನ ಮೌಲ್ಯ	ಆದಾಯ
ಭಟ್ಕಳ	1108.66	66.52	820.29	49.22
ಹೊನ್ನಾವರ	104.73	6.28	161.44	9.69
ತದಡಿ	1641.68	98.51	939.57	56.37
ಒಟ್ಟು ಮೊತ್ತ	**2855.07**	**171.31**	**1921.30**	**115.28**

ಮಂಜುಗಡ್ಡೆ ಸ್ಥಾವರಗಳಿಂದ ಆದಾಯ:–

ನಿಗಮವು ಮಂಗಳೂರಿನಲ್ಲಿ ಮೂರು ಮಂಜುಗಡ್ಡೆ ಸ್ಥಾವರಗಳು (30ಟನ್x2) ಮತ್ತು (40ಟನ್x1), ಮಲ್ಪೆಯಲ್ಲಿ ಎರಡು ಮಂಜುಗಡ್ಡೆ ಸ್ಥಾವರಗಳು (20ಟನ್x2), ಗಂಗೊಳ್ಳಿಯಲ್ಲಿ ಎರಡು ಮಂಜುಗಡ್ಡೆ ಸ್ಥಾವರಗಳು (15ಟನ್x2), ಹೊನ್ನಾವರದಲ್ಲಿ ಎರಡು ಮಂಜುಗಡ್ಡೆ ಸ್ಥಾವರಗಳನ್ನು (10ಟನ್x2), ಭಟ್ಕಳದಲ್ಲಿ ಒಂದು ಮಂಜುಗಡ್ಡೆ ಸ್ಥಾವರ (10ಟನ್x1) ಮತ್ತು ಕಾರವಾರದಲ್ಲಿ ಎರಡು ಮಂಜುಗಡ್ಡೆ ಸ್ಥಾವರ (10ಟನ್x2), ನಡೆಸುತ್ತಿದೆ. ಈ ಮಂಜುಗಡ್ಡೆ ಸ್ಥಾವರಗಳನ್ನು ರಾಜ್ಯ ಹಾಗೂ ಕೇಂದ್ರ ಸರಕಾರ ಮತ್ತು ಆರ್.ಕೆ.ವಿ.ವೈ ನಿಧಿಗಳನ್ನು ಬಳಸಿಕೊಂಡು ಸ್ಥಾಪಿಸಲಾಗಿದ್ದು ಮೀನುಗಾರಿಕೆ ಕ್ಷೇತ್ರದ ಬೇಡಿಕೆಗಳನ್ನು ಪೂರೈಸುತ್ತಿದ್ದು, ನಿಗಮಕ್ಕೆ ಲಾಭವನ್ನು ತರುತ್ತಿದೆ.

ವರದಿ ವರ್ಷದಲ್ಲಿ ಉತ್ಪಾದಿಸಲಾದ ಮಂಜುಗಡ್ಡೆಯ ಪ್ರಮಾಣ ಮತ್ತು ಸ್ಥಾವರಗಳಿಂದ ಗಳಿಸಲಾದ ನೇರ ಆದಾಯವನ್ನು ಕಳೆದ ವರ್ಷದ ಅಂಕಿ ಅಂಶಗಳ ಹೋಲಿಕೆಯೊಂದಿಗೆ ಈ ಕೆಳಗೆ ನೀಡಲಾಗಿದೆ.

(ಮೊತ್ತ ಲಕ್ಷಗಳಲ್ಲಿ)

ಘಟಕ	2020–2021		2019–2020	
	ಟನ್‌ಗಳು	ಮೊತ್ತ	ಟನ್‌ಗಳು	ಮೊತ್ತ
ಮಂಗಳೂರು	13001	96.38	18696	140.55
ಮಲ್ಪೆ	6157	56.61	ಲೈಸೆನ್ಸ್ ಮೇಲೆ ನೀಡಲಾಗಿದೆ.	
ಗಂಗೊಳ್ಳಿ	1418	17.02	4590	54.09
ಹೊನ್ನಾವರ	ಲೈಸೆನ್ಸ್ ಮೇಲೆ ನೀಡಲಾಗಿದೆ.		ಲೈಸೆನ್ಸ್ ಮೇಲೆ ನೀಡಲಾಗಿದೆ.	
ಭಟ್ಕಳ	ಲೈಸೆನ್ಸ್ ಮೇಲೆ ನೀಡಲಾಗಿದೆ.		ಲೈಸೆನ್ಸ್ ಮೇಲೆ ನೀಡಲಾಗಿದೆ.	
ಕಾರವಾರ	ಲೈಸೆನ್ಸ್ ಮೇಲೆ ನೀಡಲಾಗಿದೆ.		ಲೈಸೆನ್ಸ್ ಮೇಲೆ ನೀಡಲಾಗಿದೆ.	
ಒಟ್ಟು ಮೊತ್ತ	**20576**	**170.01**	**23286**	**194.64**

ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಸರಕಾರವು ಲಾಕ್‌ಡೌನ್ ಘೋಷಣೆ ಮಾಡಿರುವುದರಿಂದ ಮೀನುಗಾರಿಕೆ ಬೋಟುಗಳು ಮೀನುಗಾರಿಕೆಗೆ ತೆರಳದೇ ಇರುವುದರಿಂದ ಮೀನು ಹಿಡುವಳಿ ಕಡಿಮೆಯಾಗಿದ್ದು, ಮಂಜುಗಡ್ಡೆ ಮಾರಾಟದ ಆದಾಯವು ಕಡಿಮೆಯಾಗಿರುತ್ತದೆ.

ಭಟ್ಕಳ, ಹೊನ್ನಾವರ, ಮತ್ತು ಕಾರವಾರ ಮಂಜುಗಡ್ಡೆ ಸ್ಥಾವರಗಳ ಪ್ರಗತಿಯು ತೃಪ್ತಿಕರವಾಗಿಲ್ಲವಾದ ಕಾರಣ ಆ ಸ್ಥಾವರಗಳನ್ನು ಲೈಸೆನ್ಸ್ ಮೇರೆಗೆ ನಡೆಸಲು ಖಾಸಗಿಯವರಿಗೆ ನೀಡಲಾಗಿದೆ. ಗಂಗೊಳ್ಳಿ ಮಂಜುಗಡ್ಡೆ ಸ್ಥಾವರವನ್ನು ದಿನಾಂಕ 1.10.2020 ರಿಂದ ಲೈಸೆನ್ಸ್ ಮೇಲೆ ನಡೆಸಲು ನೀಡಲಾಗಿದೆ. ವರದಿ ವರ್ಷದಲ್ಲಿ ಮಲ್ಪೆ ಮಂಜುಗಡ್ಡೆ ಸ್ಥಾವರವನ್ನು ದಿನಾಂಕ 1.8.2020 ರಿಂದ ನಿಗಮದ ಮುಖಾಂತರ ನಡೆಸಲಾಗುತ್ತಿದೆ.

ವರದಿ ವರ್ಷದಲ್ಲಿ ನಿಗಮವು ಕಾರವಾರ ಮಂಜುಗಡ್ಡೆ ಸ್ಥಾವರದಿಂದ ರೂ.7.32 ಲಕ್ಷ, ಹೊನ್ನಾವರ ಮಂಜುಗಡ್ಡೆ ಸ್ಥಾವರದಿಂದ ರೂ.5.64 ಲಕ್ಷ, ಭಟ್ಕಳ ಮಂಜುಗಡ್ಡೆ ಸ್ಥಾವರದಿಂದ ರೂ.2.17 ಲಕ್ಷ, ಗಂಗೊಳ್ಳಿ ಮಂಜುಗಡ್ಡೆ ಸ್ಥಾವರದಿಂದ ರೂ.8.10 ಲಕ್ಷ ಮತ್ತು ಮಲ್ಪೆ ಮಂಜುಗಡ್ಡೆ ಸ್ಥಾವರದಿಂದ ರೂ.6.50 ಲಕ್ಷ ಲೈಸೆನ್ಸ್ ಫೀ ಪಡೆದಿರುತ್ತದೆ. ವರದಿ ಸಾಲಿನಲ್ಲಿ ಈ ಮಂಜುಗಡ್ಡೆ ಸ್ಥಾವರಗಳಿಂದ ಬಂದ ಆದಾಯ ಹಿಂದಿನ ಸಾಲಿನ ಆದಾಯಕ್ಕಿಂತ ಕಡಿಮೆಯಾಗಿರುತ್ತದೆ.

ಸಮಗ್ರ ಹವಾನಿಯಂತ್ರಿತ ಮೀನು ಮಾರಾಟ ಮಳಿಗೆಗಳು, ಮತ್ಸ್ಯದರ್ಶಿನಿಗಳು ಮತ್ತು ಅಲಂಕಾರಿಕಾ ಮೀನು ಮಾರಾಟ ಚಟುವಟಿಕೆಗಳಿಂದ ಆದಾಯ:–

ತಾಜಾ ಮತ್ತು ಶೀತಲೀಕರಿಸಿದ ಮೀನುಗಳು, ಮೌಲ್ಯವರ್ಧಿತ ಮೀನು ಉತ್ಪನ್ನಗಳು, ಅಲಂಕಾರಿಕಾ ಮೀನುಗಳು ಮತ್ತು ಅಕ್ವೇರಿಯಂಗಳನ್ನು ಈಗಾಗಲೇ ಪ್ರಾರಂಭಿಸಿರುವ ಮೀನು ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತದೆ. ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಆಧುನಿಕ ಮೀನು ಉಪಹಾರ ಗೃಹ (ಮತ್ಸ್ಯದರ್ಶಿನಿ) ಕಾರ್ಯಚರಣೆ ಮುಂದುವರಿದಿವೆ. ಕಬ್ಬನ್ ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿಯಲ್ಲಿ ಮೀನಿನ ಊಟ, ಮೀನಿನ ಖಾದ್ಯಗಳು ಕಡಿಮೆ ಬೆಲೆಗೆ ಲಭಿಸುತ್ತಿದ್ದು, ಇದು ಸಾರ್ವಜನಿಕರಲ್ಲಿ ಬಹಳ ಜನಪ್ರಿಯವಾಗಿದೆ. ಕಬ್ಬನ್ ಪಾರ್ಕ್ ಮತ್ತು ತುಮಕೂರಿನಲ್ಲಿ ಪ್ರಾರಂಭಿಸಿದ ಸಂಜೆ ಉಪಹಾರ ಗೃಹಗಳನ್ನು ವರದಿ ವರ್ಷದಲ್ಲಿ ಮುಂದುವರಿಸಲಾಗಿದೆ. ವರದಿ ಸಾಲಿನಲ್ಲಿ ನಿಗಮವು ರೂ.866.51 ಲಕ್ಷ ವ್ಯವಹಾರ ನಡೆಸಿದ್ದು, ಹಿಂದಿನ ಸಾಲಿನಲ್ಲಿ ರೂ.1168.50 ಲಕ್ಷ ವ್ಯವಹಾರವನ್ನು ಮಾಡಲಾಗಿತ್ತು. ವರದಿ ವರ್ಷದಲ್ಲಿ ಮೀನಿನ ಮತ್ತು ಮೀನಿನ ಉತ್ಪನ್ನಗಳ ಮಾರಾಟದ ಆದಾಯವು ಕಡಿಮೆಯಾಗಿರುತ್ತದೆ.

ಮತ್ಸ್ಯಾಶ್ರಯ ಯೋಜನೆಯ ಅನುಷ್ಠಾನ:–

ರಾಜ್ಯದಲ್ಲಿ ಮೀನುಗಾರರಿಗೆ ಮನೆಗಳನ್ನು ನಿರ್ಮಿಸುವ ಯೋಜನೆಗಳಾದ ಮತ್ಸ್ಯಾಶ್ರಯ ಯೋಜನೆ ಮತ್ತು ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆಗಳ ಅನುಷ್ಠಾನಕ್ಕೆ ನೋಡಲ್ ಏಜನ್ಸಿಯಾಗಿ ನಿಗಮವನ್ನು 2017–18ನೇ ಸಾಲಿನವರೆಗೆ ನೇಮಿಸಲಾಗಿತ್ತು. 2017–18ನೇ ಸಾಲಿನಿಂದ ಮತ್ಸ್ಯಾಶ್ರಯ ಯೋಜನೆ ಮತ್ತು ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆಗಳ ಅನುಷ್ಠಾನಕ್ಕೆ ನೋಡಲ್ ಏಜನ್ಸಿಯಾಗಿ ನಿಗಮದ ಬದಲು ರಾಜೀವಗಾಂಧಿ ಹೌಸಿಂಗ್ ಕಾರ್ಪೊರೇಷನ್‌ರವರನ್ನು ನೇಮಿಸಲಾಗಿತ್ತು. ನಿಗಮವು ಈ ಹಿಂದೆ ಮತ್ಸ್ಯಾಶ್ರಯ ಯೋಜನೆ ಮತ್ತು ರಾಷ್ಟ್ರೀಯ ಮೀನುಗಾರರ ಕಲ್ಯಾಣನಿಧಿ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಿರುವುದನ್ನು ಪರಿಗಣಿಸಿ ಕರ್ನಾಟಕ ಸರಕಾರ ನಿಗಮವನ್ನು ಪುನಃ 2018–19ನೇ ಸಾಲಿನಿಂದ ಮತ್ಸ್ಯಾಶ್ರಯ ಯೋಜನೆ ಮತ್ತು ರಾಷ್ಟ್ರೀಯ ಮೀನುಗಾರರ ಕಲ್ಯಾಣನಿಧಿ ಯೋಜನೆಗಳ ಅನುಷ್ಠಾನಕ್ಕೆ" ನೋಡಲ್ ಏಜನ್ಸಿಯಾಗಿ ನೇಮಿಸಿದ್ದು, ವರದಿ ಸಾಲಿನಲ್ಲಿ ರಾಜೀವಗಾಂಧಿ ಹೌಸಿಂಗ್ ಕಾರ್ಪೊರೇಷನ್‌ರವರು ಸರ್ಕಾರ ಅವರಿಗೆ ಮೇಲಿನ ಯೋಜನೆಗಾಗಿ ಬಿಡುಗಡೆ ಮಾಡಿದ ರೂ.2,417.30 ಲಕ್ಷವನ್ನು ನಮ್ಮ ನಿಗಮಕ್ಕೆ ನೀಡಿರುತ್ತಾರೆ. ನಿಗಮವು ವರದಿ ವರ್ಷದಲ್ಲಿ ಪ್ರಸ್ತುತ ಅನುಷ್ಠಾನಗೊಳ್ಳುತ್ತಿರುವ ಯೋಜನೆಯ ಫಲಾನುಭವಿಗಳಿಗೆ ರೂ.13,56,97,000/– ಹಣ ಬಿಡುಗಡೆ ಮಾಡಿದೆ.

ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ ಯೋಜನೆಯಡಿಯಲ್ಲಿ ಮೀನು ಮಾರುಕಟ್ಟೆಗಳ ನಿರ್ಮಾಣ:–

ನಿಗಮವು ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ ಮತ್ತು ರಾಜ್ಯ ಸರಕಾರದ ಆರ್ಥಿಕ ನೆರವಿನಿಂದ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಿಸಲು ನೋಡಲ್ ಏಜನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಉಡುಪಿ ಜಿಲ್ಲೆಯ ಸಾಸ್ತಾನ ಮೀನು ಮಾರುಕಟ್ಟೆಯ ನಿರ್ಮಾಣದ ಪೂರ್ಣಗೊಂಡಿದ್ದು, ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ. ಕೊಡಗು ಜಿಲ್ಲೆಯ ವಿರಾಜಪೇಟೆ, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಮೀನುಗಾರಿಕೆ ಇಲಾಖೆ, ಎನ್.ಎಫ್.ಡಿ.ಬಿ., ಮತ್ತು ನಬಾರ್ಡಿನ ಆರ್.ಐ.ಡಿ.ಎಫ್. ಯೋಜನೆಯ ಆರ್ಥಿಕ ನೆರವಿನೊಂದಿಗೆ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣ ಕೆಲಸ ಪ್ರಾರಂಭಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

2. ಲಾಭಾಂಶ:–

ನಿಗಮವು 2019–20 ಮತ್ತು 2020–21ನೇ ಸಾಲಿನಲ್ಲಿ ನಿಗಮದ ತದಡಿ ಸ್ಥಾವರವನ್ನು ಆಧುನಿಕ ಮೀನು ಸಂಸ್ಕರಣಾ ಮತ್ತು ರಫ್ತು ಘಟಕವನ್ನಾಗಿ ನವೀಕರಿಸುವ ಬಗ್ಗೆ ದುಡಿಮೆ ಬಂಡವಾಳ ಹಾಗೂ ಯೋಜನಾ ಹೆಚ್ಚುವರಿ ವೆಚ್ಚ ಬಾಬ್ತು ಒಟ್ಟಿಗೆ ರೂ.5.72 ಕೋಟಿ ಮತ್ತು ಕೋವಿಡ್–19ಕ್ಕೆ ಸಂಬಂಧಪಟ್ಟಂತೆ ಖರ್ಚು ವೆಚ್ಚಗಳನ್ನು ನಿಗಮದ ಲಾಭಾಂಶದಿಂದ ಭರಿಸಬೇಕಾಗಿದೆ. ವರದಿ ಸಾಲಿನಲ್ಲಿ ನಿಗಮವು ರೂ.1.24 ಕೋಟಿ ನಿವ್ವಳ ಲಾಭಗಳಿಸಿರುತ್ತದೆ. ಪ್ರಸ್ತುತ ತದಡಿ ಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದ್ದು, ಈ ಕಾಮಗಾರಿಯ ಬಾಬ್ತು ರೂ.1.23 ಕೋಟಿ ಪಾವತಿಸಲು ಬಾಕಿ ಇರುತ್ತದೆ. ಆದುದರಿಂದ ಮೇಲೆ ತಿಳಿಸಿದ ವೆಚ್ಚಗಳನ್ನು ಭರಿಸಲು ಲಾಭಾಂಶವನ್ನು ಕಾದಿರಿಸಬೇಕಾಗಿರುವುದರಿಂದ ದಿನಾಂಕ 31.3.2021ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ಡಿವಿಡೆಂಡ್ ಶಿಫಾರಸ್ಸು ಮಾಡದೇ ಇರಲು ಆಡಳಿತ ಮಂಡಳಿಯವರು ತೀರ್ಮಾನಿಸಿರುತ್ತಾರೆ.

3. ವಾರಸುದಾರರಿಲ್ಲದ ಲಾಭಾಂಶವನ್ನು ಇನ್ವೆಸ್ಟರ್ ಎಜುಕೇಶನ್ ಮತ್ತು ಪ್ರೊಟೆಕ್ಷನ್ ಫಂಡ್‌ಗೆ ವರ್ಗಾಯಿಸುವುದು.

ಹಿಂದಿನ ಸಾಲಿನಲ್ಲಿ ದಿನಾಂಕ 31.3.2016 ರವರೆಗೆ ಲಾಭಾಂಶ ಶಿಫಾರಸ್ಸು ಹಾಗೂ ಪಾವತಿ ಮಾಡದಿರುವುದರಿಂದ ಕಂಪೆನಿ ಕಾಯಿದೆ 2013ರ ಸೆಕ್ಷನ್ 125(2)ರ ನಿಯಮಾವಳಿಗಳು ನಿಗಮಕ್ಕೆ ಅನ್ವಯವಾಗುವುದಿಲ್ಲ.

4. ವ್ಯವಹಾರಿಕಾ ನಿರ್ವಹಣೆಯ ವಿಮರ್ಶೆ ಹಾಗೂ ಮುನ್ನೋಟ:–

ನಿಗಮವು ರಾಜ್ಯ ಸರಕಾರದ ಷೇರು ಹಣ, ಕೇಂದ್ರ ಸರ್ಕಾರದ ಕೃಷಿ ಸಚಿವಾಲಯದ ಅನುದಾನ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ) ಯಡಿ ಬಿಡುಗಡೆಯಾದ ಅನುದಾನದಿಂದ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಗೊಂಡಿದೆ. ಆರ್.ಕೆ.ವಿ.ವೈಯಡಿಯಲ್ಲಿ ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ, ಸಂಸ್ಕರಣ ಪೂರ್ವ ಸ್ಥಾವರಗಳ ನಿರ್ಮಾಣ, ಸುಸಜ್ಜಿತ ಮತ್ತು ಸ್ವಚ್ಛ ಮೀನು ಮಾರಾಟ ಮಳಿಗೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಿಗಮವು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯದ ಮತ್ತು ರಾಜ್ಯ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅನುದಾನದಡಿ ತದಡಿ ಮೀನುಗಾರಿಕೆ ಬಂದರಿನಲ್ಲಿ ನಿಗಮದ ಸ್ಥಾವರವನ್ನು ಆಧುನಿಕ ಮೀನು ಸಂಸ್ಕರಣಾ ಮತ್ತು ರಫ್ತು ಘಟಕವನ್ನಾಗಿ ನವೀಕರಿಸುವ ಯೋಜನೆಯ ಕೆಲಸವನ್ನು ಪ್ರಾರಂಭಿಸಿದ್ದು, ಪ್ರಸ್ತುತ ಯೋಜನೆಯು ಪೂರ್ಣಗೊಂಡಿರುತ್ತದೆ.

ಕರ್ನಾಟಕ ರಾಜ್ಯ ಸರಕಾರ 2018–19ನೇ ಸಾಲಿನ ಆಯವ್ಯಯದಲ್ಲಿ ಮತ್ಸ್ಯಜೋಪಾಸನೆ ಯೋಜನೆಯಡಿ ರಾಜ್ಯದ ಆಯ್ದ 10 ಮೀನು ಮಾರುಕಟ್ಟೆಯಲ್ಲಿ ಪ್ರತೀ ಮಾರುಕಟ್ಟೆಗೆ ರೂ.10.00 ಲಕ್ಷ ವೆಚ್ಚದಲ್ಲಿ 2 ಟನ್ ಸಾಮರ್ಥ್ಯದ ಶೀತಲೀಕರಣ ಘಟಕ (ಚಿಲ್ಲರ್)ನ್ನು

ನಿರ್ಮಿಸುವ ಬಗ್ಗೆ ನಿಗಮಕ್ಕೆ ರೂ.1.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಟೆಂಡರ್ ಕರೆದಾಗ ಟೆಂಡರ್‌ದಾರರು ಪ್ರತೀ ಶೀತಲೀಕರಣ ಘಟಕದ ಬಗ್ಗೆ ಕಡಿಮೆ ವೆಚ್ಚವನ್ನು ನಮೂದಿಸಿರುವುದರಿಂದ ನಿಗಮವು ಹೆಚ್ಚುವರಿಯಾಗಿ 10 ಶೀತಲೀಕರಣ ಘಟಕ (ಚಿಲ್ಲರ್)ಗಳನ್ನು ನಿರ್ಮಿಸಲು ಯೋಜಿಸಿದ್ದು, ಪ್ರಸ್ತುತ 16 ಎರಡು ಟನ್ ಶೀತಲೀಕರಣ ಘಟಕಗಳ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, ಅವುಗಳನ್ನು ಫಲಾನುಭವಿಗಳ ಉಪಯೋಗಕ್ಕಾಗಿ ಹಸ್ತಾಂತರಿಸಲಾಗಿದೆ. ಉಳಿದ 4 ಎರಡು ಟನ್ ಸಾಮರ್ಥ್ಯದ ಶೀತಲೀಕರಣ ಘಟಕ (ಚಿಲ್ಲರ್)ಗಳ ನಿರ್ಮಾಣ ಯೋಜನೆಯ ಕಾಮಗಾರಿಯು ಪ್ರಗತಿಯಲ್ಲಿದೆ.

ವರದಿ ವರ್ಷದಲ್ಲಿ ಸರಕಾರವು ನಬಾರ್ಡ್ ಆರ್‌ಐಡಿಎಫ್ ಸ್ಕೀಮ್–24ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ, ಬಿಜಾಪುರ ಜಿಲ್ಲೆಯ ಇಂಡಿ, ರಾಯಚೂರು ಜಿಲ್ಲೆಯ ಸಿರಿಗೊಪ್ಪ ಮತ್ತು ಸಿಂಧನೂರು ಹಾಗೂ ಯಾದಗಿರಿ ಜಿಲ್ಲೆಯ ಯಾದಗಿರಿಯಲ್ಲಿ ತಲಾ ರೂ.1.00 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮರಿ ಉತ್ಪಾದನಾ ಕೇಂದ್ರ ಶಿವಪುರ ಇದರ ನಿರ್ಮಾಣಕ್ಕಾಗಿ ರೂ.3.40 ಕೊಟಿ ಹಾಗೂ ನಾರಾಯಣಪುರ ಫಿಶ್ ಫಾರ್ಮ್‌ನ ನವೀಕರಣಕ್ಕಾಗಿ ರೂ.3.00 ಕೋಟಿ ಒಟ್ಟು ರೂ.11.40 ಕೋಟಿ ಅನುದಾನ ಮಂಜೂರಾಗಿರುತ್ತದೆ. ಮೇಲಿನ ಯೋಜನೆಗಳ ಬಾಬ್ತು ಶಿವಪುರ ಮತ್ತು ನಾರಾಯಣಪುರ ಮೀನು ಮರಿ ಉತ್ಪಾದನಾ ಕೇಂದ್ರ ನಿರ್ಮಾಣ ಯೋಜನೆಯ ಕಾಮಗಾರಿಯನ್ನು ದಿನಾಂಕ 20.2.2020ರ ಸರ್ಕಾರದ ಆದೇಶದಂತೆ ಬಂದರು ಮತ್ತು ಮೀನುಗಾರಿಕೆ ಇಲಾಖೆ ಉಡುಪಿ ಇದರ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ವಹಿಸಲಾಗಿದ್ದು, ಸದ್ರಿ ಕಾಮಗಾರಿ ಬಗ್ಗೆ ಮಂಜೂರಾದ ರೂ.6.40 ಕೋಟಿ ಅನುದಾನವನ್ನು ಸರಕಾರಕ್ಕೆ ಹಿಂದಿರುಗಿಸಲಾಗಿದೆ.

2019–20ನೇ ಸಾಲಿನಲ್ಲಿ ನಿಗಮವು ತಲಾ ರೂ.6.25 ಕೋಟಿ ವೆಚ್ಚದ 2 ಹೊಸ ತೇಲುವ ಜಟ್ಟಿ ನಿರ್ಮಾಣದ ಯೋಜನೆಯನ್ನು ಮಂಗಳೂರು ಮತ್ತು ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಹಮ್ಮಿಕೊಂಡಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.12.50 ಕೋಟಿ ಆಗಿದ್ದು, ಈ ವೆಚ್ಚವನ್ನು ಮೀನುಗಾರಿಕಾ ಇಲಾಖೆ ಭರಿಸುತ್ತದೆ. ಪ್ರಸ್ತುತ ಈ ಯೋಜನೆಯ ವಿಸ್ತೃತ ಯೋಜನಾ ವರದಿಯ ತಯಾರಿಕೆ ಪೂರ್ಣಗೊಂಡಿದ್ದು, ಟೆಂಡರ್ ಪ್ರಕ್ರಿಯ ಜಾರಿಯಲ್ಲಿದೆ. ಸದ್ರಿ ಯೋಜನೆಗೆ ರಾಜ್ಯ ಸರ್ಕಾರದಿಂದ ರೂ.6.25 ಕೋಟಿ ಹಣ ಬಿಡುಗಡೆಯಾಗಿರುತ್ತದೆ.

ಮೇಲಿನ ಯೋಜನೆಗಳು ಅನುಷ್ಠಾನಗೊಳ್ಳುತ್ತಿರುವುದರಿಂದ ನಿರ್ದೇಶಕ ಮಂಡಳಿಯು ಮುಂದಿನ ಸಾಲಿನಲ್ಲಿ ಹೆಚ್ಚು ವ್ಯವಹಾರ ಹಾಗೂ ಅಭಿವೃದ್ಧಿಯನ್ನು ಹೊಂದುವ ಆಶಾವಾದ ಹೊಂದಿದೆ.

2019–20ನೇ ಸಾಲಿನಲ್ಲಿ ನಿಗಮವು ತಲಾ ರೂ.50.00 ಲಕ್ಷ ವೆಚ್ಚದ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿ ಮತ್ತು ಬೆಳಗಾವಿ ಪಟ್ಟಣದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದೆ.

ನಿಗಮವು 2020–21ನೇ ಸಾಲಿನ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.2.00 ಕೋಟಿ ವೆಚ್ಚದಲ್ಲಿ ವಿವಿಧ ಸಾಮರ್ಥ್ಯದ ಒಟ್ಟು 8 ಸಂಚಾರಿ ಶೀಥಲೀಕರಣ/ಶಾಖಾನಿರೋಧಕ ವಾಹನಗಳನ್ನು ನಿರ್ಮಿಸಿ ದಿನಾಂಕ 3.09.2021ರಂದು ಮಾನ್ಯ ಸಚಿವರು ಹಾಗೂ ಇತರೆ ಗಣ್ಯರು ನಿಗಮದ ಅಧ್ಯಕ್ಷರಿಗೆ ವಾಹನದ ಕೀಯನ್ನು ಹಸ್ತಾಂತರಿಸಿರುತ್ತಾರೆ.

5. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಮತ್ತು ಈ ವರದಿ ಸಲ್ಲಿಸುವ ಅವಧಿಯೊಳಗೆ ಹಣಕಾಸು ಸ್ಥಿತಿಯಲ್ಲಿ ಆಗಿರಬಹುದಾದ ಬದಲಾವಣೆಗಳು ಮತ್ತು ಬಾಧ್ಯತೆಗಳ ಬಗ್ಗೆ:–

ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಮತ್ತು ಈ ವರದಿ ಸಲ್ಲಿಸುವ ಅವಧಿಯೊಳಗೆ ಹಣಕಾಸು ಸ್ಥಿತಿಯಲ್ಲಿ ಆಗಿರಬಹುದಾದ ಬದಲಾವಣೆಗಳು ಮತ್ತು ಬಾಧ್ಯತೆಗಳು ಇರುವುದಿಲ್ಲ.

6. ಶಕ್ತಿಯ ಬಳಕೆ ಮತ್ತು ತಾಂತ್ರಿಕ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವು:–

ಶಕ್ತಿಯ ಬಳಕೆ ಮತ್ತು ತಾಂತ್ರಿಕ ಅಳವಡಿಕೆ ಕುರಿತಾದ ಕಂಪೆನಿ ಕಾಯಿದೆ 2013, ಸೆಕ್ಷನ್ 134 (3)(ಎಂ) ಹಾಗೂ ಕಂಪೆನಿ (ಅಕೌಂಟ್ಸ್) ರೂಲ್ಸ್ 2014 ರ ರೂಲ್ಸ್ 8(3) ರನ್ವಯ ಮಾಹಿತಿಯನ್ನು ಅನುಭಂದ–ಎಯಲ್ಲಿ ನೀಡಲಾಗಿದೆ

7. ಸಂಭಾವ್ಯ ಅಪಾಯಗಳು ಮತ್ತು ಕಳಕಳಿಗಳ ನಿರ್ವಹಣಾ ವ್ಯವಸ್ಥೆಗಳ ರಚನೆ ಬಗ್ಗೆ ಹೇಳಿಕೆ:–

ನಿಗಮದ ದೈನಂದಿನ ವ್ಯವಹಾರಗಳಿಗೆ ಇದಿರಾಗುವ ಸಂಭಾವ್ಯ ಅಪಾಯಗಳು ಬಹಳ ಕನಿಷ್ಠವಾಗಿರುವುದರಿಂದ ನಿಗಮವು ಸಂಭಾವ್ಯ ಅಪಾಯ ನಿರ್ವಹಣ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.

8. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ:–

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಕಂಪೆನಿ ಕಾಯ್ದೆ2013 ಸೆಕ್ಷನ್ 135 ಮತ್ತು ಕಂಪೆನಿ (ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ರೂಲ್ಸ್ 2014 ನಿಯಮಾವಳಿಗಳ ಅನ್ವಯ ಶ್ರೀ. ರಾಮಾಚಾರ್ಯ, ಮೀನುಗಾರಿಕಾ ನಿರ್ದೇಶಕರು, ಅಧ್ಯಕ್ಷರು, ಶ್ರೀ. ಎಂ.ಎಲ್. ದೊಡ್ಡಮನಿ, ಶ್ರೀಮತಿ. ಪದ್ಮಾವತಿ ಮತ್ತು ಶ್ರೀಮತಿ. ಸಿ. ಹೇಮಲತ, ಇವರನ್ನು ಒಳಗೊಂಡ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ನೇಮಿಸಲಾಗಿದೆ. ನಿಗಮದ ಆಡಳಿತ ಮಂಡಳಿಯಿಂದ ಅನುಮೋದನೆಗೊಂಡ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನಿಯಮಾವಳಿಗಳನ್ನು ನಿಗಮದ ವೆಬ್‌ಸೈಟ್ (www.kfdcfish.com) ನಲ್ಲಿ ಹಾಕಲಾಗಿದೆ.

ನಿಗಮವು ವರದಿ ಸಾಲಿನಲ್ಲಿ ಸಾಧಿಸಿದ ವ್ಯವಹಾರ, ನಿವ್ವಳ ಮೌಲ್ಯ ಮತ್ತು ಲಾಭಾಂಶ ಕಂಪೆನಿ ಕಾಯ್ದೆ 2013ರ ಸೆಕ್ಷನ್ 135ರ ನಿಯಮಾವಳಿಯಲ್ಲಿ ನಮೂದಿಸಿದ ಮಿತಿಗಿಂತ ಕಡಿಮೆ ಇರುವುದರಿಂದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಬಾಬ್ತು ಹಣ ವಿನಿಯೋಗಿಸಲಾಗಿಲ್ಲ.

9. ಕಂಪೆನಿ ಕಾಯ್ದೆ 2013, ಸೆಕ್ಷನ್ 186 ರಕ್ಕೆ ಒಳಪಟ್ಟಂತೆ ನಿಗಮವು ನೀಡಿದ ಸಾಲ, ಖಾತರಿ ಹಾಗೂ ಹೂಡಿಕೆಗಳ ವಿವರ:–

ಪ್ರಸಕ್ತ ಸಾಲಿನಲ್ಲಿ ನಿಗಮವು ಯಾವುದೇ ಸಾಲ, ಖಾತರಿ ನೀಡದಿರುವುದರಿಂದ ಹಾಗೂ ಹೂಡಿಕೆಗಳನ್ನು ಮಾಡದಿರುವುದರಿಂದ ಮೇಲಿನ ನಿಯಮಾವಳಿಗಳು ಅನ್ವಯವಾಗುವುದಿಲ್ಲ.

10. ಒಪ್ಪಂದ ಅಥವಾ ಸಂಬಂಧಿತರೊಂದಿಗೆ ವ್ಯವಸ್ಥೆ:–

ವರದಿ ಆರ್ಥಿಕ ವರ್ಷದಲ್ಲಿ ಕಂಪೆನಿ ಕಾಯ್ದೆ 2013, ಸೆಕ್ಷನ್ 188ಕ್ಕೆ ಒಳಪಡುವಂತಹ ಯಾವುದೇ ಒಪ್ಪಂದ ಅಥವಾ ವ್ಯವಸ್ಥೆಯನ್ನು ಸಂಬಂಧಿತರೊಂದಿಗೆ ಮಾಡಿಕೊಂಡಿರುವುದಿಲ್ಲ.

11. ಲೆಕ್ಕ ಪರಿಶೋಧಕರು ಹಾಗೂ ವೃತ್ತಿ ನಿರತ ಕಂಪೆನಿ ಸೆಕ್ರೆಟರಿ ವರದಿಯಲ್ಲಿ ವ್ಯಕ್ತ ಪಡಿಸಿದ ಪ್ರತಿಕೂಲ ಅಭಿಪ್ರಾಯಗಳಿಗೆ ಹಾಗೂ ಟಿಪ್ಪಣಿಗಳಿಗೆ ಸ್ಪಷ್ಟೀಕರಣ:–

ಲೆಕ್ಕ ಪರಿಶೋಧಕರು ಅವರ ವರದಿಯಲ್ಲಿ ವ್ಯಕ್ತಪಡಿಸಿದ ಪ್ರತಿಕೂಲ ಅಭಿಪ್ರಾಯಗಳಿಗೆ ಹಾಗೂ ಟಿಪ್ಪಣಿಗಳಿಗೆ ಆಡಳಿತ ಮಂಡಳಿಯವರು ನೀಡಿದ ಸ್ಪಷ್ಟೀಕರಣವನ್ನು ಅನುಬಂಧದಲ್ಲಿ ನೀಡಲಾಗಿದೆ. ವೃತ್ತಿ ನಿರತ ಕಂಪೆನಿ ಸೆಕ್ರೆಟರಿರವರ ಸೆಕ್ರಟೇರಿಯಲ್ ಆಡಿಟ್‌ರಿ ಪೋರ್ಟ್ ನಿಯಮಾವಳಿಗಳು ನಿಗಮಕ್ಕೆ ಲಗಾವು ಆಗುವುದಿಲ್ಲ.

12. ನಿರ್ದೇಶಕರ ನೇಮಕಾತಿ, ಸಂಭಾವನೆ ಹಾಗೂ ಅವರ ಕರ್ತವ್ಯಗಳ ಬಗ್ಗೆ ನಿಗಮದ ನಿಯಮಾವಳಿಗಳು:–

ಈ ಬಗ್ಗೆ ನೋಮಿನೇಶನ್ ಕಮಿಟಿ ಮತ್ತು ರೆಮ್ಯೂನರೇಶನ್ ಕಮಿಟಿ ರಚನೆಗೆ ಸಂಬಂಧಪಟ್ಟ ಕಂಪೆನಿ ಕಾಯ್ದೆ 2013 ರ ಸೆಕ್ಷನ್ 178(1) ನಿಗಮಕ್ಕೆ ಲಗಾವು ಆಗುವುದಿಲ್ಲ.

13. ಆಡಳಿತ ಮಂಡಳಿಯ ಸಭೆಯ ಸಂಖ್ಯೆ:–

ವರದಿ ವರ್ಷದಲ್ಲಿ ಆಡಳಿತ ಮಂಡಳಿಯ ಸದಸ್ಯರು 5 ಬಾರಿ ಸಭೆ ಜರಗಿಸಿರುತ್ತಾರೆ.

14. ಮಾನವ ಸಂಪನ್ಮೂಲ:–

ನಿಗಮವು 81 ಮಂದಿ ಖಾಯಂ ನೌಕರರನ್ನು ಹೊಂದಿದ್ದು, ಇವರಲ್ಲಿ 22 ಮಂದಿ ಕರ್ನಾಟಕ ರಾಜ್ಯ ಪಾನೀಯ ನಿಗಮ ಹಾಗೂ ಒಬ್ಬರು ಡಾ। ಬಿ.ಆರ್. ಅಂಬೇಡ್ಕರ್ ನಿಗಮಕ್ಕೆ ನಿಯೋಜನೆಗೊಂಡ ಸಿಬ್ಬಂದಿಗಳು ಒಳಗೊಂಡಿರುತ್ತಾರೆ. ನಿಗಮದಲ್ಲಿ ಮೀನುಗಾರಿಕೆ ಇಲಾಖೆಯಿಂದ ನಿಯೋಜನೆಗೊಂಡ 2 ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ. ನಿಗಮದ ಒಟ್ಟು ಸಿಬ್ಬಂದಿಗಳಲ್ಲಿ 17 ಮಂದಿ ಪರಿಶಿಷ್ಟ ಜಾತಿ ಮತ್ತು 10 ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ನಿಗಮದಲ್ಲಿ ಪ್ರಸ್ತುತ ಒಟ್ಟು 145 ಮಂದಿ ಹೊರಗುತ್ತಿಗೆ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

15. ನಿರ್ದೇಶಕರ ಜವಾಬ್ದಾರಿ ಕುರಿತು ಹೇಳಿಕೆ:–

ಕಂಪೆನಿ ಕಾಯ್ದೆ 2013ರ ಪರಿಚ್ಛೇದ 134(3)(ಸಿ), 134(5) ಹಾಗೂ ಕಂಪನಿ (ಅಕೌಂಟ್ಸ್) ರೂಲ್ಸ್ 2014 ರ ನಿಯಮ 8 ರ ಪ್ರಕಾರ ನಿರ್ದೇಶಕರ ಹೇಳಿಕೆ.

1. ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸುವಾಗ ಸೂಕ್ತವಾದ ಅಕೌಂಟಿಂಗ್ ಸ್ಟಾಂಡರ್ಡನ್ನು ಬಳಕೆ ಮಾಡಿಕೊಂಡಿದ್ದು ಸೂಕ್ತ ವಿಶ್ಲೇಷಣೆಗಳನ್ನು ಅವಶ್ಯಕ ವಿವರಗಳೊಂದಿಗೆ ಸಲ್ಲಿಸಲಾಗಿದೆ.

2. ನಿರ್ದೇಶಕರು ಸೂಕ್ತವಾದ ಅಕೌಂಟಿಂಗ್ ಧೋರಣೆಗಳನ್ನು ಅಂಗೀಕರಿಸಿದ್ದು, ಅವುಗಳನ್ನು ನಿಖರವಾಗಿ ತಯಾರಿಸಿ ಅಂದಾಜು ಮತ್ತು ತೀರ್ಪುಗಳನ್ನು ಸೂಕ್ತವಾಗಿ ವಿಮರ್ಶಿಸಿ ಸಕಾರಣವಾಗಿವೆ ಎಂದು ತಿಳಿದು ನಿಗಮದ ಸತ್ಯ ಮತ್ತು ನೈಜ ನೋಟದ ಲೆಕ್ಕಪತ್ರಗಳನ್ನು ಹಾಗೂ ಲಾಭ ನಷ್ಟ ತಖ್ತೆಯನ್ನು ತಯಾರಿಸುವಲ್ಲಿ ಆದ್ಯ ಗಮನ ಹರಿಸಿರುತ್ತಾರೆ.

3. ಕಂಪೆನಿ ಕಾಯ್ದೆ 2013ರ ಅನುಸಾರವಾಗಿ ನಿರ್ದೇಶಕರು ಸೂಕ್ತವಾದ ಹಾಗೂ ಸಾಕಷ್ಟು ಎಚ್ಚರಿಕೆಯಿಂದ ಅಕೌಂಟಿಂಗ್ ದಾಖಲೆಗಳನ್ನು ಕಾಯ್ದೆಗನುಸಾರವಾಗಿದೆಯೆಂದು ಒರೆಗೆ ಹಚ್ಚಿ ಪರೀಕ್ಷಿಸಿ, ನಿಗಮದ ಆಸ್ತಿಯನ್ನು ಸುಸ್ತಿರವಾಗಿ ಕಾಪಾಡಿಕೊಂಡು ಬರುವಲ್ಲಿ, ವಂಚನೆ ಹಾಗೂ ನಿಯಮಬಾಹಿರತೆ ಮುಕ್ತತೆ ಕುರಿತಾಗಿ ಸಾಕಷ್ಟು ಎಚ್ಚರ ವಹಿಸಿರುತ್ತಾರೆ.

4. ನಿರ್ದೇಶಕರು ವಾರ್ಷಿಕ ಲೆಕ್ಕ ಪತ್ರಗಳನ್ನು ಮುಂದುವರಿಯುತ್ತಿರುವ ಸಂಸ್ಥೆ ಎಂಬ ಆಧಾರದಲ್ಲಿ ತಯಾರಿಸಿದ್ದಾರೆ.

5. ಕಂಪೆನಿ ಕಾಯ್ದೆ 2013, ಸೆಕ್ಷನ್ 134(3)(ಇ) ನಿಯಮಾವಳಿಗಳು ನಿಗಮಕ್ಕೆ ಲಗಾವು ಆಗದಿರುವುದರಿಂದ ಆಂತರಿಕ ಆರ್ಥಿಕತೆ ನಿಯಂತ್ರಣ ಧೋರಣೆಯನ್ನು ಅನುಸ್ಥಾಪಿಸಿಲ್ಲ.

6. ನಿರ್ದೇಶಕರು ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿ ಪೂರೈಕೆಗೊಳ್ಳಬೇಕಾಗಿರುವ ವಿವರಗಳನ್ನು ನೀಡುವಲ್ಲಿ ಸೂಕ್ತ ಹಾಗೂ ಸಕಾಲಿಕ ವ್ಯವಸ್ಥೆಗಳನ್ನು ಸಂಯೋಜಿಸಿದ್ದು, ಈ ವ್ಯವಸ್ಥೆಯು ಸೂಕ್ತವಾಗಿ, ಸಕಾಲಿಕವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.

16. ಕಂಪೆನಿಯ ಸಹಭಾಗಿತ್ವದಲ್ಲಿ ನಿರ್ವಹಿಸಿರುವ ಅಂಗಸಂಸ್ಥೆಗಳು ಅಥವಾ ಸಹಭಾಗಿತ್ವದ ಅಥವಾ ಸಹವರ್ತಿತ ಕಂಪೆನಿಗಳು :–

ಪ್ರಸಕ್ತ ಸಾಲಿನಲ್ಲಿ ನಿಗಮವು ಯಾವುದೇ ಅಂಗಸಂಸ್ಥೆಗಳು ಅಥವಾ ಸಹಭಾಗಿತ್ವದ ಅಥವಾ ಸಹವರ್ತಿತ ಕಂಪೆನಿಗಳನ್ನು ಹೊಂದಿರುವುದಿಲ್ಲ.

17. ಠೇವಣಿಗಳು:–

ಪ್ರಸಕ್ತ ಸಾಲಿನಲ್ಲಿ ನಿಗಮವು ಕಂಪೆನಿಗಳ ಕಾಯ್ದೆಗಳ ಅಡಿಯಲ್ಲಿ ಬರುವ ಯಾವುದೇ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ ಹಾಗೂ ನವೀಕರಣ ಮಾಡಿರುವುದಿಲ್ಲ.

18. ನಿರ್ದೇಶಕರು:–

ವರದಿ ವರ್ಷದಲ್ಲಿ ನಿರ್ದೇಶಕರ ಮಂಡಳಿಯಲ್ಲಿ ಈ ಕೆಳಗಿನಂತೆ ಬದಲಾವಣೆಯಾಗಿದೆ.

ನಿವೃತ್ತಿ ಹೊಂದಿದ ನಿರ್ದೇಶಕರು			
ಕ್ರ.ಸಂ	ಹೆಸರು	ಹುದ್ದೆ ಮತ್ತು ಡಿನ್ ಸಂಖ್ಯೆ	ನಿವೃತ್ತಿ ಹೊಂದಿದ ದಿನಾಂಕ
1	ಶ್ರೀ. ಕೋಟ ಶ್ರೀನಿವಾಸ ಪೂಜಾರಿ	ಅಧ್ಯಕ್ಷರು (ಡಿನ್: 08578032)	24.11.2020
2	ಶ್ರೀ. ರಾಮಕೃಷ್ಣ	ನಿರ್ದೇಶಕರು (ಡಿನ್: 08345376)	29.08.2020
3	ಶ್ರೀಮತಿ. ಆರ್. ಲೀಲಾವತಿ	ನಿರ್ದೇಶಕರು (ಡಿನ್: 08053877)	17.10.2020
4	ಶ್ರೀಮತಿ. ಶಕುಂತಲ ಚೌಗಲ	ನಿರ್ದೇಶಕರು (ಡಿನ್: 08955638)	24.03.2021

ನೇಮಕಾತಿ ಹೊಂದಿದ ನಿರ್ದೇಶಕರು			
ಕ್ರ.ಸಂ	ಹೆಸರು	ಹುದ್ದೆ ಮತ್ತು ಡಿನ್ ಸಂಖ್ಯೆ	ನೇಮಕಾತಿ ಹೊಂದಿದ ದಿನಾಂಕ
1	ಶ್ರೀ. ನಿತಿನ್ ಕುಮಾರ್	ಅಧ್ಯಕ್ಷರು (ಡಿನ್: 03398268)	24.11.2020
2	ಶ್ರೀ. ರಾಮಾಚಾರ್ಯ ಪುರಾಣಿಕ್	ನಿರ್ದೇಶಕರು (ಡಿನ್:08956093)	29.08.2020
3	ಶ್ರೀ. ಶಂಕರಗೌಡ ದೊಡ್ಡಮನಿ	ನಿರ್ದೇಶಕರು (ಡಿನ್:09242823)	24.03.2021
4	ಶ್ರೀಮತಿ. ಶಕುಂತಲ ಚೌಗಲ	ನಿರ್ದೇಶಕರು (ಡಿನ್:08955638)	17.10.2020
5	ಶ್ರೀ. ಸಂದೀಪ್ ಕುಂದರ್	ನಿರ್ದೇಶಕರು (ಡಿನ್:09134778)	15.03.2021
6	ಶ್ರೀ. ಬಿ. ರಾಜಪ್ಪ	ನಿರ್ದೇಶಕರು (ಡಿನ್: 09134606)	15.03.2021
7	ಶ್ರೀ. ಜೆ.ಎ. ಕೃಷ್ಣಮೂರ್ತಿ	ನಿರ್ದೇಶಕರು (ಡಿನ್: 09134757)	15.03.2021
8	ಶ್ರೀ. ಬಾರಕೇರ್ ಗಡ್ಡಪ್ಪ	ನಿರ್ದೇಶಕರು (ಡಿನ್: 09164135)	15.03.2021
9	ಶ್ರೀ. ರಾಜೇಂದ್ರ ನಾಯ್ಕ	ನಿರ್ದೇಶಕರು (ಡಿನ್: 07670354)	15.03.2021

ನಿಗಮವು ದಿನಾಂಕ 31.3.2021ರ ವರ್ಷದ ಅಂತ್ಯಕ್ಕೆ ಈ ಕೆಳಗಿನ ನಿರ್ದೇಶಕರನ್ನು ಹೊಂದಿರುತ್ತದೆ.

ಕ್ರ.ಸಂ	ಹೆಸರು	ಹುದ್ದೆ ಮತ್ತು ಡಿನ್ ಸಂಖ್ಯೆ
1	ಶ್ರೀ. ನಿತಿನ್ ಕುಮಾರ್	ಅಧ್ಯಕ್ಷರು (ಡಿನ್: 03398268)
2	ಶ್ರೀ. ಎಂ.ಎಲ್. ದೊಡ್ಡಮನಿ	ವ್ಯವಸ್ಥಾಪಕ ನಿರ್ದೇಶಕರು (ಡಿನ್:07998781)
3	ಶ್ರೀ. ರಾಮಾಚಾರ್ಯ ಪುರಾಣಿಕ್	ನಿರ್ದೇಶಕರು (ಡಿನ್:08956093)
4	ಶ್ರೀಮತಿ. ಪದ್ಮಾವತಿ	ನಿರ್ದೇಶಕರು (ಡಿನ್:07262520)
5	ಶ್ರೀ. ಶಂಕರಗೌಡ ದೊಡ್ಡಮನಿ	ನಿರ್ದೇಶಕರು (ಡಿನ್:09242823)
6	ಶ್ರೀಮತಿ. ಸಿ. ಹೇಮಲತ	ನಿರ್ದೇಶಕರು (ಡಿನ್: 08569406)
7	ಶ್ರೀ. ಸಂದೀಪ್ ಕುಂದರ್	ನಿರ್ದೇಶಕರು (ಡಿನ್:09134778)
8	ಶ್ರೀ. ಬಿ. ರಾಜಪ್ಪ	ನಿರ್ದೇಶಕರು (ಡಿನ್: 09134606)
9	ಶ್ರೀ. ಜೆ.ಎ. ಕೃಷ್ಣಮೂರ್ತಿ	ನಿರ್ದೇಶಕರು (ಡಿನ್: 09134757)
10	ಶ್ರೀ. ಬಾರಕೇರ್ ಗಡ್ಡಪ್ಪ	ನಿರ್ದೇಶಕರು (ಡಿನ್: 09164135)
11	ಶ್ರೀ. ರಾಜೇಂದ್ರ ನಾಯ್ಕ	ನಿರ್ದೇಶಕರು (ಡಿನ್: 07670354)

ಪ್ರಸಕ್ತ ಹಣಕಾಸು ವರ್ಷದ ಅಂತ್ಯ ಮತ್ತು ಈ ವರದಿ ಸಲ್ಲಿಸುವ ಅವಧಿಯೊಳಗೆ ಆಡಳಿತ ಮಂಡಳಿಯಲ್ಲಿ ಆದ ಬದಲಾವಣೆಗಳು:–

ಕರ್ನಾಟಕ ಸರಕಾರ ನೇಮಿಸಿದ ಅಧಿಕಾರೇತರ ನಿರ್ದೇಶಕರು			
ಕ್ರ.ಸಂ	**ಹೆಸರು**	**ಹುದ್ದೆ**	**ಡಿನ್ ಸಂಖ್ಯೆ**
1	ಶ್ರೀಮತಿ. ಗೀತಾಂಜಲಿ ಎಂ. ಸುವರ್ಣ	ನಿರ್ದೇಶಕರು	09387785
2	ಶ್ರೀ. ಆನಂದ ಖಾರ್ವಿ	ನಿರ್ದೇಶಕರು	09387760
3	ಶ್ರೀ. ಸಂತೋಷ ಪೂಜಾರಿ ಕರ್ಕುಂಜೆ	ನಿರ್ದೇಶಕರು	09387793

ವರದಿ ವರ್ಷದಲ್ಲಿ ಜರಗಿದ ಆಡಳಿತ ಮಂಡಳಿ ಸಭೆ ಮತ್ತು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ ನಿರ್ದೇಶಕರ ಹಾಜರಾತಿ ವಿವರ:

ಕ್ರ.ಸಂ	**ಹೆಸರು**	**ಆಡಳಿತ ಮಂಡಳಿ ಸಭೆ**	**ವಾರ್ಷಿಕ ಮಹಾಸಭೆಗೆ ಹಾಜರಾಗಿದ್ದಾರಾ? (ವಾರ್ಷಿಕ ಮಹಾಸಭೆ ದಿನಾಂಕ 26.11.2021)**
1	ಶ್ರೀ. ಕೋಟ ಶ್ರೀನಿವಾಸ ಪೂಜಾರಿ (ದಿನಾಂಕ 24.11.2020ರ ವರೆಗೆ)	2	ಅನ್ವಯವಾಗುವುದಿಲ್ಲ
2	ಶ್ರೀ. ನಿತಿನ್ ಕುಮಾರ್ (ದಿನಾಂಕ 24.11.2020 ರಿಂದ)	3	ಹೌದು
3	ಶ್ರೀ. ಎಂ.ಎಲ್. ದೊಡ್ಡಮನಿ	5	ಹೌದು
4	ಶ್ರೀಮತಿ. ಆರ್. ಲೀಲಾವತಿ (ದಿನಾಂಕ 17.10.2020ರ ವರೆಗೆ)	1	ಅನ್ವಯವಾಗುವುದಿಲ್ಲ
5	ಶ್ರೀಮತಿ. ಪದ್ಮಾವತಿ	5	ಹೌದು
6	ಶ್ರೀ. ರಾಮಕೃಷ್ಣ (ದಿನಾಂಕ 29.8.2020ರ ವರೆಗೆ)	1	ಅನ್ವಯವಾಗುವುದಿಲ್ಲ
7	ಶ್ರೀ. ರಾಮಾಚಾರ್ಯ ಪುರಾಣಿಕ್ (ದಿನಾಂಕ 29.8.2020 ರಿಂದ)	4	ಹೌದು
8	ಶ್ರೀಮತಿ. ಸಿ. ಹೇಮಲತ	2	ಇಲ್ಲ
9	ಶ್ರೀಮತಿ. ಶಕುಂತಲ ಚೌಗಲ (ದಿನಾಂಕ 17.10.2020 ರಿಂದ)	3	ಇಲ್ಲ
10	ಶ್ರೀ. ಸಂದೀಪ್ ಕುಂದರ್ (ದಿನಾಂಕ 15.03.2021 ರಿಂದ)	1	ಅನ್ವಯವಾಗುವುದಿಲ್ಲ
11	ಶ್ರೀ. ಬಿ. ರಾಜಪ್ಪ (ದಿನಾಂಕ 15.03.2021 ರಿಂದ)	1	ಅನ್ವಯವಾಗುವುದಿಲ್ಲ
12	ಶ್ರೀ. ಜೆ.ಎ. ಕೃಷ್ಣಮೂರ್ತಿ (ದಿನಾಂಕ 15.03.2021 ರಿಂದ)	1	ಅನ್ವಯವಾಗುವುದಿಲ್ಲ
13	ಶ್ರೀ. ಬಾರಕೇರ್ ಗಡ್ಡಪ್ಪ (ದಿನಾಂಕ 15.03.2021 ರಿಂದ)	1	ಅನ್ವಯವಾಗುವುದಿಲ್ಲ
14	ಶ್ರೀ. ರಾಜೇಂದ್ರ ನಾಯ್ಕ (ದಿನಾಂಕ 15.03.2021 ರಿಂದ)	1	ಅನ್ವಯವಾಗುವುದಿಲ್ಲ

19. ಸ್ವತಂತ್ರ ನಿರ್ದೇಶಕರ ದೃಢೀಕರಣ:–

ಕಂಪೆನಿ ಕಾಯ್ದೆ 2013 ರ ಸೆಕ್ಷನ್ 149 ಸ್ವತಂತ್ರ ನಿರ್ದೇಶಕರ ನೇಮಕಾತಿ ನಿಯಮಾವಳಿಗಳು ನಿಗಮಕ್ಕೆ ಲಗಾವು ಆಗುವುದಿಲ್ಲ.

20. ಲೆಕ್ಕ ಪರಿಶೋಧಕರು:–

ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ನವದೆಹಲಿ ಅವರು ಮೇ। ಕಾಮತ್ & ರಾವ್ (ಎಸ್ಆರ್2102), ಚಾರ್ಟರ್ಡ್ ಅಕೌಂಟೆಂಟ್ಸ್, 14–1–56/1, ಕರಂಗಲ್ಪಾಡಿ, ಮಂಗಳೂರು–575003 ಇವರನ್ನು 2020–2021ನೇ ಸಾಲಿಗೆ ನಿಗಮದ ಶಾಸನಾತ್ಮಕ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿದ್ದು ಅವರು ಮುಂದಿನ ಮಹಾಸಭೆಯಲ್ಲಿ ನಿವೃತ್ತರಾಗಲಿದ್ದಾರೆ.

2021–22ನೇ ಸಾಲಿಗೆ ಮೇ। ಕಾಮತ್ & ರಾವ್ (ಎಸ್ಆರ್2102), ಚಾರ್ಟರ್ಡ್ ಅಕೌಂಟೆಂಟ್ಸ್, 14–1–56/1, ಕರಂಗಲ್ಪಾಡಿ, ಮಂಗಳೂರು–575003 ಇವರನ್ನು ನಿಗಮದ ಲೆಕ್ಕ ಪರಿಶೋಧಕರಾಗಿ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ನವದೆಹಲಿ, ಇವರು ಪುನಃ ನೇಮಿಸಿರುತ್ತಾರೆ.

21. ಲೆಕ್ಕ ಪರಿಶೋಧನಾ ಸಮಿತಿ:–

ಕಂಪೆನಿ ಕಾಯಿದೆ 2013, ಸೆಕ್ಷನ್ 177 ಹಾಗೂ ಕಂಪೆನಿ (ಮೀಟಿಂಗ್ಸ್ ಆಫ್‌ದ ಬೋರ್ಡ್ & ಇಟ್ಸ್ ಪೌವರ್ಸ್) ರೂಲ್ಸ್ 2014ರ ನಿಯಮ 6 ಮತ್ತು 7 ನಿಗಮಕ್ಕೆ ಲಗಾವು ಆಗುವುದಿಲ್ಲ. 1956ರ ಕಂಪೆನಿ ಕಾಯ್ದೆಯ ಸೆಕ್ಷನ್ 292ಎ ಪ್ರಕಾರ ಅವಶ್ಯಕವಿರುವಂತೆ ನಿರ್ದೇಶಕರ ಮಂಡಳಿಯು ತಾರಿಕು 21.10.2010 ರಂದು ನಡೆದ ಸಭೆಯಲ್ಲಿ ಮೂರು ನಿರ್ದೇಶಕರನ್ನೊಳಗೊಂಡ ಆಡಿಟ್ ಕಮಿಟಿಯನ್ನು ಸ್ಥಾಪಿಸಿದ್ದು ಅದನ್ನು ಮುಂದುವರಿಸಲಾಗಿದೆ. ವರದಿ ವರ್ಷದಲ್ಲಿ ಎರಡು ಆಡಿಟ್ ಕಮಿಟಿ ಸಭೆ ಜರಗಿರುತ್ತದೆ.

22. ಶೇರ್ ಬಂಡವಾಳ:–

ವರದಿ ವರ್ಷದಲ್ಲಿ ನಿಗಮವು ಯಾವುದೇ ಶೇರನ್ನು ನೀಡದೇ ಇರುವುದರಿಂದ ದಿನಾಂಕ 31.3.2021ಕ್ಕೆ ನಿಗಮದ ಶೇರು ಬಂಡವಾಳ ರೂ.17,84,12,700/– ಮುಂದುವರೆದಿರುತ್ತದೆ.

23. ವರದಿ ವರ್ಷದಲ್ಲಿ ಪ್ರಾಧಿಕಾರಗಳು ಹಾಗೂ ನ್ಯಾಯಾಲಯಗಳು ನೀಡಿರುವ ಮಹತ್ವದ ಆದೇಶಗಳ ವಿವರ:–

ವರದಿ ವರ್ಷದಲ್ಲಿ ನಿಗಮದ ಅಸ್ತಿತ್ವಕ್ಕೆ ಅಥವಾ ವಹಿವಾಟಿಗೆ ದಕ್ಕೆಯಾಗುವಂತಹ ಯಾವುದೇ ಮಹತ್ವದ ಆದೇಶಗಳನ್ನು ನ್ಯಾಯಾಲಯ ಅಥವಾ ಯಾವುದೇ ಶಾಸನಬದ್ಧ ಪ್ರಾಧೀಕಾರಗಳು ನೀಡಿರುವುದಿಲ್ಲ.

24. ಕೃತಜ್ಞತೆಗಳು:–

ಕರ್ನಾಟಕ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಮೀನುಗಾರಿಕೆ ಇಲಾಖೆ, ಭಾರತ ಸರಕಾರದ ಕೃಷಿ ಸಚಿವಾಲಯದ ಪಶುಸಂಗೋಪನಾ ಇಲಾಖೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೇಂದ್ರ ಸರಕಾರದ ಕಾರ್ಪೊರೇಟ್ ಎಫೇರ್ಸ್ ಸಚಿವಾಲಯ, ಮಿನಿಸ್ಟ್ರಿ ಆಫ್ ಕಾಮರ್ಸ್ ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರದ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆ, ವಿಶ್ವೇಶ್ವರಯ್ಯ ಟ್ರೇಡ್ ಪ್ರಮೋಷನ್ ಸೆಂಟರ್ ಬೆಂಗಳೂರು, ರೆಜಿಸ್ಟ್ರಾರ್ ಆಫ್ ಕಂಪೆನೀಸ್ ಕರ್ನಾಟಕ, ಶಾಸನಾತ್ಮಕ ಲೆಕ್ಕ ಪರಿಶೋಧಕರಾದ ಮೇ। ಕಾಮತ್ & ರಾವ್, ಚಾರ್ಟರ್ಡ್ ಅಕೌಂಟೆಂಟ್ಸ್ ಮಂಗಳೂರು, ಆಂತರಿಕ ಲೆಕ್ಕ ಪರಿಶೋಧಕರಾದ ಎಸ್.ಎಸ್. ನಾಯಕ್ ಮಂಗಳೂರು, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ನವದೆಹಲಿ, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಐಸಿಐಸಿಐ ಬ್ಯಾಂಕ್, ಹೆಚ್‌ಡಿಎಫ್‌ಸಿ ಬ್ಯಾಂಕ್, ಐಡಿಬಿಐ ಬ್ಯಾಂಕ್, ಆ್ಯಕ್ಸೀಸ್ ಬ್ಯಾಂಕ್, ಕೋಟಕ್ ಮಹಿಂದ್ರ ಬ್ಯಾಂಕ್, ಕೆ.ವಿ.ಜಿ. ಬ್ಯಾಂಕ್, ಭಾರತೀಯ ಜೀವ ವಿಮಾ ನಿಗಮ, ನೌಕರರ ಭವಿಷ್ಯ ನಿಧಿ ಸಂಸ್ಥೆ ಮತ್ತು ಕಾರ್ಮಿಕರ ರಾಜ್ಯ ವಿಮಾ ನಿಗಮಗಳ ನಿರಂತರ ಬೆಂಬಲ, ಪ್ರೋತ್ಸಾಹ ಹಾಗೂ ಸಹಾಯಕ್ಕಾಗಿ ನಮ್ಮ ನಿರ್ದೇಶಕರುಗಳು ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ನಿಗಮದ ಆಡಳಿತ ಮತ್ತು ನೌಕರರ ನಡುವಣ ಸಂಬಂಧ ಸೌಹಾರ್ದಯುತವಾಗಿ ಮುಂದುವರಿದಿದ್ದು, ವರದಿ ವರ್ಷದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೀಡಿದ ಸಹಕಾರ ಮತ್ತು ಪ್ರಯತ್ನಗಳಿಗೆ ನಿರ್ದೇಶಕರುಗಳು ಮೆಚ್ಚುಗೆ ಹಾಗೂ ಪ್ರಶಂಸೆಯನ್ನು ದಾಖಲಿಸಲು ಇಚ್ಚಿಸುತ್ತಾರೆ.

ನಿರ್ದೇಶಕ ಮಂಡಳಿಯ ಪರವಾಗಿ

ಸಹಿ/–

ಸ್ಥಳ:– ಬೆಂಗಳೂರು

ದಿನಾಂಕ:– 30–10–2021

ಶ್ರೀ ನಿತಿನ್ ಕುಮಾರ್

ಅಧ್ಯಕ್ಷರು

ನಿರ್ದೇಶಕರ ವರದಿಗೆ ಅನುಬಂಧ

2013 ರ ಕಂಪೆನಿ ಕಾಯಿದೆಯ ಪರಿಚ್ಛೇದ 134(3)(ಎಂ) ಯ ಪ್ರಕಾರ ಹಾಗೂ ದ ಕಂಪೆನೀಸ್ (ಎಕೌಂಟ್ಸ್) ರೂಲ್ಸ್ 2014ರ ರೂಲ್ಸ್ 8(3)ರಂತೆ ಮಾಹಿತಿಗಳು.

ಅ. ಶಕ್ತಿ ಸಂಚಯನ:–

ನಿಗದಿತ ಫಾರ್ಮು 'ಎ' ಯ ಪ್ರಕಾರ ಒಟ್ಟು ಬಳಸಿದ ಶಕ್ತಿಯ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

"ಫಾರ್ಮು ಎ"

	ಪ್ರಸ್ತುತ ವರ್ಷ 2020–2021	ಹಿಂದಿನ ವರ್ಷ 2019–2020
(1) **ವಿದ್ಯುತ್:**		
(ಅ) ಖರೀದಿಸಿದ ಯೂನಿಟ್‌ಗಳು (ಕಿ.ಮಾ.ಆ)	14,82,095	13,72,012
ಒಟ್ಟು ಮೊಬಲಗು	ರೂ.1,54,54,299	ರೂ. 1,13,60,209
ಯೂನಿಟ್ ದರ	ರೂ. 10.43	ರೂ. 8.28
(ಬ) ಸ್ವಂತ ಉತ್ಪಾದನೆ:		
1. ಡೀಸೆಲ್ ಜನರೇಟರ್ ಮೂಲಕ (ಯೂನಿಟ್‌ಗಳು)		
2. ಯೂನಿಟ್ ಲೀಟರ್ ಡೀಸೆಲ್‌ಗೆ		
3. ಯೂನಿಟ್ ದರ		

(2) ಪ್ರತಿ ಯೂನಿಟ್ ಉತ್ಪಾದನೆಗೆ ಬಳಕೆ:

ವಿದ್ಯುತ್‌ಚ್ಛಕ್ತಿಯು ಮಂಜುಗಡ್ಡೆ ಉತ್ಪಾದನೆಗೆ ಉಪಯೋಗಿಸಲ್ಪಟ್ಟಿರುತ್ತದೆ.

ಅ. ತಂತ್ರಜ್ಞಾನ ಅಳವಡಿಕೆ

ಪ್ರಸ್ತುತ ವರ್ಷ ಯಾವುದೇ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದಿಲ್ಲ.

ಇ. ವಿದೇಶಿ ವಿನಿಮಯ ಗಳಿಕೆ ಮತ್ತು ವ್ಯಯ:–

ಕಂಪೆನಿಯು ವರದಿ ವರ್ಷದಲ್ಲಿ ಯಾವುದೇ ಉತ್ಪನ್ನವನ್ನು ರಫ್ತು ಮತ್ತು ಆಮದು ಮಾಡಿಕೊಂಡಿಲ್ಲ. ಆದುದರಿಂದ ಪ್ರಸ್ತುತ ವರ್ಷ ವಿದೇಶಿ ವಿನಿಮಯ ವ್ಯಯ ಇರುವುದಿಲ್ಲ.

ನಿರ್ದೇಶಕ ಮಂಡಳಿಯ ಪರವಾಗಿ

ಸಹಿ/–

ಶ್ರೀ. ನಿತಿನ್ ಕುಮಾರ್
ಅಧ್ಯಕ್ಷರು

ಸ್ಥಳ:– ಬೆಂಗಳೂರು
ದಿನಾಂಕ:– 30–10–2021

****

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರಿಗೆ

ಹಣಕಾಸು ತಃಖ್ತೆಗಳ ಮೇಲೆ ವರದಿ :

ಅಭಿಪ್ರಾಯ:

ಇದರೊಂದಿಗೆ ಲಗತ್ತಿಸಿರುವ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ (ಕಂಪೆನಿ) 2021ನೇ ಮಾರ್ಚ್ 31ರ ತುಲನಾ ಪಟ್ಟಿ, ವರ್ಷಾಂತ್ಯದ ಲಾಭ ನಷ್ಟದ ಹಾಗೂ ಹಣದ ಹರಿವಿನ ತಃಖ್ತೆಗಳ ಲೆಕ್ಕ ಪರಿಶೋಧನೆಯನ್ನು ನಾವು ಮಾಡಿದ್ದೇವೆ ಹಾಗೂ ಅದರ ಸಾರಾಂಶವನ್ನು ಆರ್ಥಿಕ ಲೆಕ್ಕ ತಃಖ್ತೆಗಳು, ಪ್ರಾಮುಖ್ಯ ಲೆಕ್ಕಪತ್ರಗಳನ್ನಿಡುವ ನಿಯಮಗಳು ಮತ್ತು ಇತರ ವಿವರಣಾತ್ಮಕ ಮಾಹಿತಿಯೊಂದಿಗೆ ನೀಡಲಾಗಿದೆ.

ನಮ್ಮ ಅಭಿಪ್ರಾಯದ ಪ್ರಕಾರ ಮತ್ತು ನಮ್ಮ ಮಾಹಿತಿ ಪ್ರಕಾರ, ನಮಗೆ ನೀಡಿದ ವಿವರಣೆಗಳ ಪ್ರಕಾರ ಮೇಲಿನ ಆರ್ಥಿಕ ತಃಖ್ತೆಗಳು 2013ರ ಕಂಪೆನಿ ಕಾಯಿದೆಗಳ (ಕಾಯಿದೆ)ನ್ವಯ ಭಾರತದಲ್ಲಿ ಸಾಮಾನ್ಯವಾಗಿ ಪ್ರಚಲಿತದಲ್ಲಿರುವ ಲೆಕ್ಕಪತ್ರಗಳನ್ನಿಡುವ ಕಂಪೆನಿ ವ್ಯವಹಾರಗಳ ಮಾನದಂಡಗಳಿಗನುಗುಣವಾದ ಲೆಕ್ಕತಃಖ್ತೆಗಳ ಆಧಾರದಲ್ಲಿ 31ನೇ ಮಾರ್ಚ್ 2021ಕ್ಕೆ

ಎ) 31ನೇ ಮಾರ್ಚ್ 2021ನೇ ತುಲನಾ ಪಟ್ಟಿ

ಬಿ) ಸದ್ರಿ ದಿನಾಂಕಕ್ಕೆ ಅಂತ್ಯವಾಗುವ ವರ್ಷದ ಲಾಭ ಮತ್ತು ನಷ್ಟದ ತಖ್ತೆಯ ಪ್ರಕಾರ ಲಾಭ.

ಸಿ) ನಗದು ಹರಿವಿನ ತಃಖ್ತೆಯ ಪ್ರಕಾರ ಸದ್ರಿ ವರ್ಷಾಂತ್ಯಕ್ಕೆ ನಗದಿನ ಹರಿವು.

ಅಭಿಪ್ರಾಯದ ಮೂಲ :

ಕಂಪೆನಿಯ ಕಾಯಿದೆಯ ಸೆಕ್ಷನ್ 143(10)ರನ್ವಯ ಪರಿಶೋಧನೆಯ ಮಾನದಂಡಗಳಿಗನುಗುಣವಾಗಿ ನಾವು ಲೆಕ್ಕಪರಿಶೋಧನೆಯನ್ನು ಮಾಡಿರುತ್ತೇವೆ. ನಮ್ಮ ವರದಿಯ ಆರ್ಥಿಕ ತಃಖ್ತೆಗಳ ವಿಭಾಗದಲ್ಲಿ ನಮ್ಮ ಜವಾಬ್ದಾರಿಯಲ್ಲಿ ಲೆಕ್ಕಪತ್ರಗಳ ಮಾನದಂಡಗಳ ಬಗ್ಗೆ ವಿವರಿಸಲ್ಪಟ್ಟಿದೆ.

ಭಾರತೀಯ ಸನದು ಲೆಕ್ಕ ಪರಿಶೋಧಕರ ಸಂಸ್ಥೆಯು ಹೊರಡಿಸಿದ ನೀತಿ ಸಂಹಿತೆಯ ಪ್ರಕಾರ ನಮ್ಮ ಪರಿಶೋಧನೆಗೆ ಅಗತ್ಯ ಬಿದ್ದಂತೆ ಒಟ್ಟಾಗಿ ನೀತಿ ಸಂಹಿತೆಯನ್ನು ಅಳವಡಿಸಿಕೊಳ್ಳುವುದಕ್ಕೆ ನಾವು ಸ್ವತಂತ್ರರಾಗಿದ್ದೇವೆ. ಕಾಯಿದೆ ಮತ್ತು ಕಾನೂನಿನನ್ವಯ ನೈತಿಕ ಸಂಹಿತೆಯ ಪ್ರಕಾರ ಅಗತ್ಯವಿದ್ದ ಜವಾಬ್ದಾರಿಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ನಮ್ಮ ಅಭಿಪ್ರಾಯದ ಪ್ರಕಾರ ನಾವು ಸಾಕಷ್ಟು ಮತ್ತು ಲೆಕ್ಕಪರಿಶೋಧನೆಗೆ ಬೇಕಾದ ಸರಿಯಾದ ಪುರಾವೆಗಳನ್ನು ಪಡಕೊಂಡಿದ್ದೇವೆ.

ವಿಷಯದ ಮಹತ್ವ :

ಕಂಪೆನಿಯು ಸಣ್ಣ ಮತ್ತು ಮಧ್ಯಮ ಉದ್ಯಮಗಳ ವ್ಯಾಪಾರ ಪಾವತಿಗಳನ್ನು ಗುರುತಿಸದೇ ಇರುವ ಕಾರಣ ನಾವು ಆರ್ಥಿಕ ತಃಖ್ತೆಯ ಟಿಪ್ಪಣಿ ಸಂಖ್ಯೆ 5.1ರ ಮೇಲೆ ಗಮನವಿಟ್ಟಿದ್ದೇವೆ.

ಹಣಕಾಸು ತಃಖ್ತೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ:

2013ರ ಕಂಪೆನಿ ಕಾಯಿದೆ ಕಲಂ 134(5)ರಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಪ್ರಕಾರ ಕಂಪೆನಿಯ ನೈಜ ಮತ್ತು ಸ್ಪಷ್ಟವಾದ ಆರ್ಥಿಕ ಫಲಿತಾಂಶ, ಆರ್ಥಿಕ ನಿರ್ವಹಣೆ ಮತ್ತು ಹಣದ ಹರಿವಿನ ವಿವರಣೆಯನ್ನೊಳಗೊಂಡಂತೆ ಕಂಪೆನಿ ಕಾನೂನಿನ ಸೆಕ್ಷನ್ 133ರ ಪ್ರಕಾರ 2014ರ ಕಂಪೆನಿ (ಅಕೌಂಟ್ಸ್) ನಿಯಮ 7ರ ಪ್ರಕಾರ ಹೇಳಿದಂತೆ ಕಡ್ಡಾಯವಾದ ಲೇಖಾ ವಿಧಾನ (ಅಕೌಂಟಿಂಗ್) ಮಾನದಂಡಗಳನ್ನು ಅನುಸರಿಸಿ ಆರ್ಥಿಕ ತಃಖ್ತೆಗಳನ್ನು ತಯಾರಿಸುವುದು ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿಯಾಗಿರುತ್ತದೆ.

ಈ ಜವಾಬ್ದಾರಿಯು ಕಂಪೆನಿಯ ಆಸ್ತಿಗಳನ್ನು ಕಾಪಾಡುವ ಸಲುವಾಗಿ ಹಾಗೂ ವಂಚನೆಗಳನ್ನು ಮತ್ತು ಇತರ ಅಕ್ರಮಗಳನ್ನು ಪತ್ತೆ ಹಚ್ಚುವ ಮತ್ತು ತಡೆಗಟ್ಟುವ ಸಲುವಾಗಿ ಅಂದಾಜು, ವಿವೇಚನೆ, ತೀರ್ಮಾನಗಳಿಂದ ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆ, ಸಾಕಷ್ಟು ಆಂತರಿಕ, ಆರ್ಥಿಕ ನಿರ್ವಹಣೆ ಮತ್ತು ನಿಯಂತ್ರಣ, ಕ್ರಮಾಗತವಾಗಿ ಆರ್ಥಿಕ ತಃಖ್ತೆಗಳನ್ನು ತಯಾರಿಸುವ ಬಗ್ಗೆ ಮತ್ತು ಬರೆದಿಡುವುದಕ್ಕಾಗಿ ಕಾಯ್ದೆ ಅನ್ವಯ ಸಮಂಜಸವಾದ ಲೆಕ್ಕಪತ್ರಗಳನ್ನಿಡುವ ಪದ್ಧತಿಯನ್ನು ಆಯ್ಕೆ ಮಾಡಿ ಅದನ್ನು ಅಳವಡಿಸಿ ವಾಸ್ತವಿಕ ಮತ್ತು ತಪ್ಪು ಹೇಳಿಕೆಯಿಂದ ಮುಕ್ತವಾದ ಖಚಿತವಾದ ಮತ್ತು ಪೂರ್ಣ ಲೆಕ್ಕಪತ್ರಗಳನ್ನು ಹಾಜರುಪಡಿಸುವುದಾಗಿರುತ್ತದೆ.

ಆರ್ಥಿಕ ತಃಖ್ತೆಗಳನ್ನು ತಯಾರಿಸುವಲ್ಲಿ ಕಂಪೆನಿಯು ಒಂದು ನಡೆಯುವ ಸಂಸ್ಥೆ ಎಂದು ಪರಿಗಣಿಸಲು ವಿಷಯಗಳನ್ನು ಸರಿಯಾಗಿ ನಿಗದಿಪಡಿಸಿ ಅಥವಾ ಮುಚ್ಚುವ ಸಂಸ್ಥೆಯೋ ಎಂದು ಸಹ ಅದರ ಆರ್ಥಿಕ ತಃಖ್ತೆಗಳಿಂದ ನಿರ್ಧರಿಸಿ ನಿಗಮದ ನಿರ್ದೇಶಕರು ಅದರ ಆರ್ಥಿಕ ವರದಿಯ ಕಾರ್ಯವಿಧಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದಾಗಿರುತ್ತದೆ.

ಆರ್ಥಿಕ ಲೆಕ್ಕ ತಃಖ್ತೆಗಳ ಪರಿಶೋಧನೆಯ ಬಗ್ಗೆ ಲೆಕ್ಕಪರಿಶೋಧಕರ ಜವಾಬ್ದಾರಿ :–

ಆರ್ಥಿಕ ತಃಖ್ತೆಗಳು ಒಟ್ಟಾರೆಯಾಗಿ ವಂಚನೆ ಮತ್ತು ತಪ್ಪುಗಳಿಂದಾಗಿ ಭೌತಿಕವಾದ ತಪ್ಪು ಹೇಳಿಕೆಯಿಂದ ಮುಕ್ತವಾಗಿರುವ ಬಗ್ಗೆ ಸಾಕಷ್ಟು ಭರವಸೆ ಬೇಕಾಗಿದ್ದು ಅದರನ್ವಯ ನಮ್ಮ ಅಭಿಪ್ರಾಯವನ್ನು ನೀಡುವುದಾಗಿರುತ್ತದೆ. ಸಾಕಷ್ಟು ಭರವಸೆ ಅಂದರೆ ಹೆಚ್ಚಿನ ಮಟ್ಟದ ಭರವಸೆಯಾಗಿದ್ದು ಯಾವುದಾದರೂ ತಪ್ಪು ಹೇಳಿಕೆಯನ್ನು ಪತ್ತೆಹಚ್ಚಲು ಎಕೌಂಟಿಂಗ್ ಸ್ಟಾಂಡರ್ಡ್ ಪ್ರಕಾರ ಪರಿಶೋಧನೆಯನ್ನು ಮಾಡಲಾಗಿದ್ದರೂ ಅದು ತಪ್ಪು ಹೇಳಿಕೆಗಳನ್ನು ಪತ್ತೆಹಚ್ಚಲು ಸಹಕಾರಿಯಾಗಿದೆ ಎಂದು ಖಾತರಿಯಿಲ್ಲ.

ಆರ್ಥಿಕ ತಃಖ್ತೆಗಳ ಪ್ರಕಾರ ಉಲ್ಲೇಖಿಸಲ್ಪಟ್ಟ ವಂಚನೆ ಮತ್ತು ತಪ್ಪುಗಳಿಂದಾಗಿ ಭೌತಿಕವಾದ ತಪ್ಪು ಹೇಳಿಕೆಗಳು ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ಆರ್ಥಿಕ ತೀರ್ಮಾನದ ಮೇಲೆ ಪ್ರಭಾವವನ್ನು ಬೀರಬಹುದು.

ನಮ್ಮ ಲೆಕ್ಕಪರಿಶೋಧನೆಯ ಪ್ರತಿ ಹಂತದಲ್ಲಿ ನಮ್ಮ ವೃತ್ತಿಗಳಿಗನುಗುಣವಾಗಿ ವೃತ್ತಿ ತೀರ್ಪು ಮತ್ತು ವೃತ್ತಿ ಸಂದೇಹಗಳನ್ನು ವ್ಯಕ್ತಪಡಿಸಿದ್ದೇವೆ.

- ನಾವು ವಂಚನೆ ಮತ್ತು ತಪ್ಪು ಹೇಳಿಕೆಗಳಿಂದ ತಪ್ಪುದಾರಿಗೆಳೆಯುವ ಅಪಾಯಗಳನ್ನು ಗುರುತಿಸಿ ಮತ್ತು ನಿರ್ಣಯಿಸಿ, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕ ಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ಮತ್ತು ನಿರ್ವಹಿಸಿ ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಮತ್ತು ಸೂಕ್ತವಾದ ಪುರಾವೆಗಳನ್ನು ಪಡೆದುಕೊಂಡು ವಂಚನೆಯಿಂದ ಉಂಟಾಗುವ ತಪ್ಪು ಗ್ರಹಿಕೆಯನ್ನು ಪತ್ತೆ ಮಾಡದಿರುವ ಅಪಾಯದಿಂದ ಉಂಟಾಗುವ ದೋಷ ಒಂದಕ್ಕಿಂತ ಹೆಚ್ಚಾಗಿರುತ್ತದೆ. ಏಕೆಂದರೆ ವಂಚನೆಯು ಒಡನಾಟ, ಖೋಟಾ, ಉದ್ದೇಶಪೂರ್ವಕ ಲೋಪಗಳು ತಪ್ಪಾಗಿ ನಿರೂಪಣೆ ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು ಒಳಗೊಂಡಿರಬಹುದು.
- ಇಂತಹ ಸಂದರ್ಭಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಂಡು ಕಂಪೆನಿ ಕಾಯ್ದೆ 2013ರ ಸೆಕ್ಷನ್ 143(3)(ಐ) ಅಡಿಯಲ್ಲಿ ಕಂಪೆನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ.
- ಬಳಸಿದ ಲೆಕ್ಕಪರಿಶೋಧಕರ ನೀತಿಗಳ ಸೂಕ್ತತೆ ಮತ್ತು ಲೆಕ್ಕಪರಿಶೋಧಕ ಅಂದಾಜುಗಳ ಸಮಂಜಸತೆ ಮತ್ತು ನಿರ್ವಹಣೆಯಿಂದ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳನ್ನು ಮೌಲ್ಯ ಮಾಪನ ಮಾಡಲಾಗಿದೆ.
- ಲೆಕ್ಕಪರಿಶೋಧನೆಯ ಕಾಳಜಿಯ ಆಧಾರವನ್ನು ನಿರ್ವಹಣೆಯ ಸೂಕ್ತತೆಯ ಬಗ್ಗೆ ತೀರ್ಮಾನಿಸಿ ಮತ್ತು ಪಡೆದ ಲೆಕ್ಕಪರಿಶೋಧನೆಯ ಸಾಕ್ಷ್ಯಗಳ ಆಧಾರದ ಮೇಲೆ ಘಟನೆಗಳು ಅಥವಾ ಷರತ್ತುಗಳಿಗೆ ಸಂಬಂಧಿಸಿದಂತೆ ವಸ್ತು ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ ಎಂದು ಕಂಪೆನಿಯು ಮುಂದುವರಿಯುವ ಸಾಮರ್ಥ್ಯದ ಮೇಲೆ ಗಮನಾರ್ಹ ಅನುಮಾನವನ್ನು ಉಂಟು ಮಾಡಬಹುದು. ವಸ್ತು ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ಹಣಕಾಸಿನ ಹೇಳಿಕೆಗಳಲ್ಲಿನ ಸಂಬಂಧಿತ ಬಹಿರಂಗಪಡಿಸುವಿಕೆಗಳಿಗೆ ನಮ್ಮ ಲೆಕ್ಕ ಪರಿಶೋಧಕರ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗಿದೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ನಮ್ಮ ತೀರ್ಮಾನಗಳು ನಮ್ಮ ಲೆಕ್ಕ ಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನೆಯ ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ ಭವಿಷ್ಯದ ಘಟನೆಗಳು ಅಥವಾ ಷರತ್ತುಗಳು ಕಂಪೆನಿಯು ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.
- ಬಹಿರಂಗಪಡಿಸುವಿಕೆಗಳು ಸೇರಿದಂತೆ ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಮತ್ತು ಹಣಕಾಸಿನ ಹೇಳಿಕೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆಯೋ ಎಂದು ಮೌಲ್ಯಮಾಪನ ಮಾಡಲಾಗಿದೆ.
- ನಮ್ಮ ಲೆಕ್ಕ ಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನ್ಯತೆಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ, ಸಮಯ ಮತ್ತು ಮಹತ್ವದ ಲೆಕ್ಕಪರಿಶೋಧನೆಯ ಅವಿಷ್ಕಾರಗಳ ಬಗ್ಗೆ ಆಡಳಿತದ ಆರೋಪ ಹೊಂದಿರುವವರೊಂದಿಗೆ ನಾವು ಸಂವಹನದ ನಡೆಸಿದ್ದೇವೆ. ಆಡಳಿತದ ಆರೋಪ ಹೊತ್ತಿರುವವರಿಗೆ ನಾವು ಸ್ವಾತಂತ್ರ್ಯದ ಬಗ್ಗೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ ಸಂಬಂಧಗಳು ಮತ್ತು ಇತರ ವಿಷಯಗಳನ್ನು ಅವರೊಂದಿಗೆ ಸಂವಹನ ನಡೆಸಿದ್ದೇವೆ ಮತ್ತು ಅನ್ವಯವಾಗುವ ಸಂಬಂಧಿತ ಸುರಕ್ಷತೆಗಳನ್ನು ಒದಗಿಸಿದ್ದೇವೆ.

ಕಾನೂನು ಮತ್ತು ಕ್ರಮ ಬದ್ಧತೆಯ ಅವಶ್ಯಕತೆಗಳ ಮೇಲಿನ ವರದಿ

1. ಕಂಪೆನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ 2016 (ಆದೇಶ) ತಿದ್ದುಪಡಿ ಮಾಡಿದಂತೆ, ಭಾರತದ ಕೇಂದ್ರ ಸರ್ಕಾರದ ಕಾಯ್ದೆಯ

   ಸೆಕ್ಷನ್ 143ರ ಉಪವಿಭಾಗ (II)ರ ಪ್ರಕಾರ ಹೊರಡಿಸಿದೆ. ನಾವು ಆದೇಶದ 3 ಮತ್ತು 4ನೇ ಪ್ಯಾರಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಕುರಿತು ಹೇಳಿಕೆ ನೀಡಿರುತ್ತೇವೆ.

(ಎ) ಕಂಪೆನಿಯು ಪರಿಮಣಾತ್ಮಕ ವಿವರಗಳು ಮತ್ತು ಸ್ಥಿರ ಆಸ್ತಿಗಳ ಪರಿಸ್ಥಿತಿ ಸೇರಿದಂತೆ ಪೂರ್ಣ ವಿವರಗಳನ್ನು ತೋರಿಸುವ ಸರಿಯಾದ ದಾಖಲೆಗಳನ್ನು ನಿರ್ವಹಿಸಿದೆ.

(ಬಿ) ವರದಿ ವರ್ಷದಲ್ಲಿ ಸ್ಥಿರ ಆಸ್ತಿಗಳ ನಿರ್ವಹಣೆಯು ಭೌತಿಕವಾಗಿ ಪರಿಶೀಲಿಸಿದೆ ಮತ್ತು ನಮಗೆ ತಿಳಿಸಲಾಗಿದೆ. ಪುಸ್ತಕಗಳ ದಾಖಲೆಗಳು ಮತ್ತು ಭೌತಿಕ ಸ್ಥಿರ ಆಸ್ತಿಗಳ ನಡುವೆ ಯಾವುದೇ ವಸ್ತು ವ್ಯತ್ಯಾಸಗಳು ನಮಗೆ ಕಂಡುಬಂದಿರುವುದಿಲ್ಲ.

(ಸಿ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ಕಂಪೆನಿಯ ದಾಖಲೆಗಳ ಪರೀಕ್ಷೆಯ ಆಧಾರದ ಮೇಲೆ ಸ್ಥಿರ ಆಸ್ತಿಗಳು ಈ ಕೆಳಗಿನವುಗಳನ್ನು ಹೊರತುಪಡಿಸಿ ಆಯವ್ಯಯದ ದಿನಾಂಕದಂತೆ ಕಂಪೆನಿ ಹೆಸರಲ್ಲಿ ನಮೂದಾಗಿದೆ.

ಆಸ್ತಿಯ ವಿವರ	ಪ್ರಕರಣಗಳ ಸಂಖ್ಯೆ	ಎಕರೆಗಳಲ್ಲಿ ವಿಸ್ತೀರ್ಣ	ಒಟ್ಟು ಮೌಲ್ಯ	ನಿವ್ವಳ ಮೌಲ್ಯ	ಷರಾ
ಜಮೀನು	1	5.53	0	0	ಸರಕಾರದ ಆದೇಶದ ಪ್ರಕಾರ ಜಮೀನನ್ನು ಕಂಪೆನಿಗೆ ವರ್ಗಾಯಿಸಲಾಗಿದೆ. ಆದಾಗ್ಯೂ ಕಂಪೆನಿ ಹೆಸರಿಗೆ ಪರಿವರ್ತನೆಯಾಗಲು ಬಾಕಿ ಇರುತ್ತದೆ.

(ii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಪರಿಶೀಲನೆಯ ಆಧಾರದ ಮೇಲೆ ದಾಸ್ತಾನು ವಸ್ತುಗಳ ಪ್ರಮಾಣವನ್ನು ಬಹಿರಂಗಪಡಿಸುವಲ್ಲಿ ಸಾಕಷ್ಟು ದಾಖಲೆಗಳಿವೆ. ದಾಸ್ತಾನುಗಳ ಭೌತಿಕ ಪರಿಶೀಲನೆಯನ್ನು ನಿಯಮಿತವಾಗಿ ನಡೆಸಲಾಗಿದೆ. ಆದರೆ ನಮ್ಮ ಪರಿಶೀಲನೆಗೆ ಯಾವುದೇ ಪೋಷಕ ಪುರಾವೆ ದೊರೆತಿಲ್ಲ.

(iii) ನಮ್ಮ ಅಭಿಪ್ರಾಯದ ಪ್ರಕಾರ 2013ರ ಕಂಪೆನಿ ಕಾಯಿದೆಯ ಸೆಕ್ಷನ್ 189ರ ಪ್ರಕಾರ ನಿರ್ವಹಿಸಬೇಕಾದ ದಾಖಲೆಯಲ್ಲಿ ನಮೂದಿಸಬೇಕಾದ ಯಾವುದೇ ಭದ್ರತೆ ಅಥವಾ ಅಭದ್ರತೆಯ ಸಾಲವನ್ನು ಯಾವುದೇ ಪಾರ್ಟಿಯವರಿಂದ ಪಡೆದಿರುವುದಿಲ್ಲ. ಅಥವಾ ಯಾರಿಗೂ ನೀಡಿರುವುದಿಲ್ಲ.

(iv) ನಮ್ಮ ಅಭಿಪ್ರಾಯದ ಪ್ರಕಾರ ಹಾಗೂ ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಅನ್ವಯಿತ ಸಾಲದ ಅನುದಾನ ಹೂಡಿಕೆ ಮಾಡುವುದು, ಗ್ಯಾರಂಟಿ ಮತ್ತು ಭದ್ರತೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಕಂಪೆನಿಯು ಕಂಪೆನಿ ಕಾಯಿದೆಯ ಸೆಕ್ಷನ್ 185 ಮತ್ತು 186ರ ಪ್ರಕಾರ ನಿಬಂಧನೆಗಳನ್ನು ಅನುಸರಿಸಿದೆ.

(v) ಕಂಪೆನಿಯು ವರದಿ ವರ್ಷದಲ್ಲಿ ಯಾವುದೇ ಠೇವಣಿಯನ್ನು ಸ್ವೀಕರಿಸಿರುವುದಿಲ್ಲ.

(vi) ಕಂಪೆನಿ ಕಾಯ್ದೆಗಳ ಪರಿಚ್ಛೇದ 148(1) ರಡಿಯ ಪ್ರಕಾರ ಈ ಕಂಪೆನಿಯಿಂದ ಉತ್ಪಾದಿಸಲಾದ ಉತ್ಪನ್ನಗಳಿಗೆ ಯಾವುದೇ ವೆಚ್ಚ ದಾಖಲೆಗಳನ್ನು ನಿರ್ವಹಿಸುವಂತೆ ಕೇಂದ್ರ ಸರಕಾರವು ಸೂಚಿಸಿರುವುದಿಲ್ಲ.

(vii)ಎ) ಶಾಸನಬದ್ಧ ಪಾವತಿಗಳಿಗೆ ಸಂಬಂಧಿಸಿದಂತೆ ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ವರ್ಷದಲ್ಲಿ ಕಂಪೆನಿಯ ಖಾತೆ ಪುಸ್ತಕಗಳಲ್ಲಿ ಕಡಿತಗೊಳಿಲಾದ / ಸಂಚಿತಗೊಂಡ ಅವಿವಾದಾತ್ಮಕ ಶಾಸನಬದ್ಧ ಪಾವತಿಗಳಾದ ಭವಿಷ್ಯನಿಧಿ ಠೇವಣಿ, ನೌಕರರ ರಾಜ್ಯ ವಿಮಾ ಠೇವಣಿ, ಆದಾಯ ತೆರಿಗೆ, ಮಾರಾಟ ತೆರಿಗೆ, ಅಬಕಾರಿ ಸುಂಕ, ಕಸ್ಟಮ್ಸ್ ಸುಂಕ, ಮೌಲ್ಯವರ್ಧಿತ ತೆರಿಗೆ, ಸೆಸ್ಸ್ ಮತ್ತು ಇತರ ಶಾಸನಬದ್ಧ ಪಾವತಿಗಳನ್ನು ಕಂಪೆನಿಗೆ ಅನ್ವಯಿಸುವ ರೀತಿಯಲ್ಲಿ ಸಕಾಲದಲ್ಲಿ ಸಂಬಂದಪಟ್ಟ ಪ್ರಾಧಿಕಾರದಲ್ಲಿ ಪಾವತಿಸಿದೆ. ಈ ಕೆಳಗಿನವುಗಳನ್ನು ಹೊರತುಪಡಿಸಿ ದಿನಾಂಕ 31-03-2021ರಂತೆ ಆರು ತಿಂಗಳುಗಳಿಂದ ಹೆಚ್ಚುಕಾಲ ಪಾವತಿಸಲು ಬಾಕಿ ಇಟ್ಟಿಲ್ಲ.

ಬಿ. ದಿನಾಂಕ 31ನೇ ಮಾರ್ಚ್ 2021ಕ್ಕೆ ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಕಸ್ಟಮ್ ಸುಂಕ, ಅಬಕಾರಿ ತೆರಿಗೆ, ಮೌಲ್ಯವರ್ಧಿತ ತೆರಿಗೆಗಳನ್ನು ಈ ಕೆಳಗಿನ ವಿವಾದಗಳಿರುವುದರಿಂದ ಪಾವತಿಸಿರುವುದಿಲ್ಲ.

ಶಾಸನದ ಹೆಸರು	ಬಾಕಿಯ ಸ್ವರೂಪ	ಮೊಬಲಗು	ಮೊತ್ತಕ್ಕೆ ಸಂಬಂಧಿಸಿದ ಅವಧಿ	ವಿವಾದ ಬಾಕಿ ಇರುವ ಪ್ರಾಧಿಕಾರ
1994ರ ಹಣಕಾಸು ಕಾಯ್ದೆ	**ಸೇವಾ ತೆರಿಗೆ**	ರೂ.26,29,508/-	2012-2013 2013-2014	ಕೇಂದ್ರ ಅಬಕಾರಿ ಮತ್ತು ಸೇವಾ ತೆರಿಗೆ ಆಯುಕ್ತರು (ಮೇಲ್ಮನವಿ)
1994ರ ಹಣಕಾಸು ಕಾಯ್ದೆ	**ಸೇವಾ ತೆರಿಗೆ**	ರೂ.3,00,020/-	2013-2014 2014-2015	ಕೇಂದ್ರ ಅಬಕಾರಿ ಮತ್ತು ಸೇವಾ ತೆರಿಗೆ ಆಯುಕ್ತರು (ಮೇಲ್ಮನವಿ)
1994ರ ಹಣಕಾಸು ಕಾಯ್ದೆ	**ಸೇವಾ ತೆರಿಗೆ**	ರೂ.38,09,641/-	2014-2015 2015-2016	ಕೇಂದ್ರ ಅಬಕಾರಿ ಮತ್ತು ಸೇವಾ ತೆರಿಗೆ ಆಯುಕ್ತರು (ಮೇಲ್ಮನವಿ)

viii. ನಮ್ಮ ಅಭಿಪ್ರಾಯದ ಪ್ರಕಾರ ಹಾಗೂ ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಹಣಕಾಸು ಸಂಸ್ಥೆ ಮತ್ತು ಸರಕಾರಕ್ಕೆ ಸಾಲ ಅಥವಾ ಎರವಲು ಮರುಪಾವತಿಗೆ ಸಂಬಂಧಿಸಿದಂತೆ ಕಂಪೆನಿಯು ಸುಸ್ತಿದಾರವಾಗಿರುವುದಿಲ್ಲ. ಕಂಪೆನಿಯು ಯಾವುದೇ ಬ್ಯಾಂಕ್‌ಗಳಿಂದ ಸಾಲ ಪಡೆದಿರುವುದಿಲ್ಲ ಮತ್ತು ಡಿಬೆಂಚರುಗಳನ್ನು ಕೊಟ್ಟಿರುವುದಿಲ್ಲ.

ix. ಕಂಪೆನಿಯು ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಸಾಲ ಉಪಕರಣಗಳು ಮತ್ತು ಟರ್ಮ್ ಸಾಲಗಳು ಸೇರಿದಂತೆ ಹೆಚ್ಚಿನ ಸಾರ್ವಜನಿಕ ಕೊಡುಗೆಗಳ ಮೂಲಕ ಕಂಪೆನಿಯು ಹಣವನ್ನು ಸಂಗ್ರಹಿಸಿಲ್ಲ ಎಂದು ನಮಗೆ ನಿರ್ವಹಣೆಯಿಂದ ತಿಳಿದು ಬಂದಿದೆ.

x. ನಿರ್ವಹಿಸಿದ ಲೆಕ್ಕ ಪರಿಶೋಧನೆಯ ಕಾರ್ಯವಿಧಾನಗಳು ಮತ್ತು ನಿರ್ವಹಣೆಯು ನೀಡಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ ಕಂಪೆನಿಯು ಅಥವಾ ಕಂಪೆನಿಯ ಮೇಲೆ ಅದರ ಅಧಿಕಾರಿಗಳು ಅಥವಾ ಉದ್ಯೋಗಿಗಳು ಮಾಡಿದ ಯಾವುದೇ ವಂಚನೆಯನ್ನು ನಿರ್ವಹಣೆಯ ವರ್ಷದಲ್ಲಿ ನಮ್ಮ ಗಮನಕ್ಕೆ ತಂದಿಲ್ಲ ಅಥವಾ ವರದಿ ಮಾಡಿಲ್ಲ ಎಂದು ನಾವು ವರದಿ ಮಾಡುತ್ತೇವೆ.

xi. ನಿರ್ವಹಿಸಿದ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳು ಮತ್ತು ನಿರ್ವಹಣೆಯು ನೀಡಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ, ಕಂಪೆನಿ ಕಾಯ್ದೆಗೆ ವೇಳಾಪಟ್ಟಿ Vಯ ನಿಬಂಧನೆಗಳಿಂದ ಕಡ್ಡಾಯವಾಗಿ ಅಗತ್ಯವಾದ ಅನುಮೋದನೆಗಳಿಗೆ ಅನುಗುಣವಾಗಿ ವ್ಯವಸ್ಥಾಪಕ ಸಂಭಾವನೆಯನ್ನು ಪಾವತಿಸಲಾಗಿದೆ, ಅಥವಾ ಒದಗಿಸಲಾಗಿದೆ.

xii. ನಮ್ಮ ಅಭಿಪ್ರಾಯದಲ್ಲಿ ಕಂಪೆನಿಯು ನಿಧಿ ಕಂಪೆನಿಯಾಗಿರುವುದಿಲ್ಲ.

xiii. ನಮ್ಮ ಅಭಿಪ್ರಾಯದ ಪ್ರಕಾರ ಹಾಗೂ ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಅನ್ವಯವಾಗುವ ಲೆಕ್ಕಗಾರಿಕೆಯ ಮಾನದಂಡಗಳಂತೆ ಕಂಪೆನಿ ಕಾಯಿದೆ 2013ರ ಪರಿಚ್ಛೇದ 177 ಮತ್ತು 188ರಂತೆ ಅಗತ್ಯವಾದ ಸಂಬಂಧಿತ ಪಾರ್ಟಿಗಳ ಮತ್ತು ಸಂಬಂಧಿತ ಪಾರ್ಟಿಗಳ ವ್ಯವಹಾರಗಳ ಬಗೆಗಿನ ವಿವರಣೆಗಳನ್ನು ಹಣಕಾಸಿನ ತಖ್ತೆಗಳಲ್ಲಿ ಬಹಿರಂಗಪಡಿಸಲಾಗಿದೆ.

xiv. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ ಕಂಪೆನಿಯು ಯಾವುದೇ ಆದ್ಯತೆಯ ಹಂಚಿಕೆ ಅಥವಾ ಷೇರುಗಳ ಖಾಸಗಿ ನಿಯೋಜನೆ ಅಥವಾ ಪರಿಶೀಲನೆಯ ವರ್ಷದಲ್ಲಿ ಸಂಪೂರ್ಣ ಅಥವಾ ಭಾಗಶಃ ಕನ್ವರ್ಟಿಬಲ್ ಡಿಬೆಂಚರ್‌ಗಳನನು ಹಂಚಿಕೆ ಮಾಡಿರುವುದಿಲ್ಲ.

xv. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ ಹಾಗೂ ಕಂಪೆನಿಯ ದಾಖಲೆಗಳು ನಮ್ಮ ಪರೀಕ್ಷೆಯ ಆಧಾರದ ಮೇಲೆ ಕಂಪೆನಿಯು ನಿರ್ದೇಶಕರು ಅಥವಾ ಅವರಿಗೆ ಸಂಬಂಧಿಸಿದ ವ್ಯಕ್ತಿಯೊಂದಿಗೆ ಯಾವುದೇ ನಗದು ರಹಿತ ವ್ಯವಹಾರ ನಡೆಸಿಲ್ಲ.

xvi. ಭಾರತೀಯ ರಿಸರ್ವ ಬ್ಯಾಂಕ್ ಕಾಯಿದೆ, 1934ರ ಕಾಲಂ 45–1A ಪ್ರಕಾರ ಕಂಪೆನಿಯು ನೊಂದಾವಣೆಗೊಳ್ಳುವ ಅವಶ್ಯಕತೆ ಇರುವುದಿಲ್ಲ.

2. ಕಾಯಿದೆಯ ಸೆಕ್ಷನ್ 143(3)ರ ಪ್ರಕಾರ ಅಗತ್ಯವಿರುವಂತೆ ನಾವು ವರದಿ ಸಲ್ಲಿಸುವುದೇನೆಂದರೆ

(ಎ) ಲೆಕ್ಕಪರಿಶೋಧನೆಯ ಉದ್ದೇಶಗಳಿಗೆ ಅವಶ್ಯಕವೆಂದು ನಮಗೆ ಕಂಡುಬಂದ ಮತ್ತು ನಾವು ನಂಬಿದ ಎಲ್ಲ ಮಾಹಿತಿಗಳನ್ನು ಮತ್ತು ವಿವರಣೆಗಳನ್ನು ಪಡೆದಿದ್ದೇವೆ.

(ಬಿ) ಕಾನೂನಿನ ಪ್ರಕಾರ ಅವಶ್ಯವಿರುವ ಸೂಕ್ತವಾದ ಲೆಕ್ಕ ಪುಸ್ತಕಗಳನ್ನು ಇರಿಸಿದ್ದು ಸದ್ರಿ ಪುಸ್ತಕಗಳಿಂದ ಸ್ಪಷ್ಟವಾಗುತ್ತದೆ. ಮತ್ತು ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸರಿಯಾದ ಮಾಹಿತಿಯನ್ನು ಭೇಟಿ ನೀಡದ ಶಾಖೆಗಳಿಂದ ಸ್ವೀಕರಿಸಲಾಗಿದೆ.

(ಸಿ) ಈ ವರದಿಯಲ್ಲಿ ವಿವರಿಸಲಾಗಿರುವ ತುಲನಾ ಪಟ್ಟಿ ಲಾಭ ಮತ್ತು ನಷ್ಟಗಳ ತಃಖ್ತೆ ಹಾಗೂ ನಗದು ಹರಿವಿನ ತಃಖ್ತೆಗಳು ಲೆಕ್ಕ ಪುಸ್ತಕಗಳೊಂದಿಗೆ ತಾಳೆಯಾಗುತ್ತದೆ. ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ನಾವು ಭೇಟಿ ನೀಡದ ಶಾಖೆಗಳಿಂದ ಮಾಹಿತಿಯನ್ನು ಸ್ವೀಕರಿಸಲಾಗಿದೆ.

(ಡಿ) ನಮ್ಮ ಅಭಿಪ್ರಾಯದಲ್ಲಿ ತುಲನಪಟ್ಟಿ ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ನಗದು ಹರಿವಿನ ಹೇಳಿಕೆ ಕಾಯಿದೆಯ ಸೆಕ್ಷನ್ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅಕೌಂಟಿಂಗ್ ಮಾನದಂಡಗಳಿಗೆ ಅನುಸಾರವಾಗಿದೆ. ಕಂಪೆನಿಗಳ (ಖಾತೆಗಳು) ನಿಯಮಗಳು, 2014ರ ನಿಯಮ 7ರೊಂದಿಗೆ ಓದಿ, ಈ ಕೆಳಗಿನವುಗಳಿಗೆ ಒಳಪಟ್ಟಿರುತ್ತದೆ. ಸ್ಥಿರ ಸ್ವತ್ತುಗಳ ದುರ್ಬಲತೆಯ ಮೇಲೆ ಅಕೌಂಟಿಂಗ್ ಸ್ಟ್ಯಾಂಡರ್ಡ್ 28ರ ಪರಿಣಾಮಗಳನ್ನು ಕಂಡು ಹಿಡಿಯುವ ಪ್ರಯತ್ನವನ್ನು ಕಂಪೆನಿಯು ಮಾಡಿಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ ದೌರ್ಬಲ್ಯದ ನಷ್ಟವಿದೆಯೋ ಇಲ್ಲವೋ ಎಂಬುದನ್ನು ಕಂಪೆನಿಯು ಅಂದಾಜು ಮಾಡಿಲ್ಲ, ಇದು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯತೆಯ ಅಗತ್ಯವಿರುತ್ತದೆ. ಈ ಲೆಕ್ಕಪರಿಶೋಧಕ ಮಾನದಂಡದ ಉದ್ದೇಶವು ಸ್ವತ್ತುಗಳನ್ನು ತಮ್ಮ ವಸೂಲಿ ಮಾಡಬಹುದಾದ ಮೊತ್ತಕ್ಕಿಂತ ಹೆಚ್ಚಿಲ್ಲ ಎಂದು ಖಚಿತಪಡಿಸಿಕೊಳ್ಳುವುದು. ಅಕೌಂಟಿಂಗ್ ಸ್ಟ್ಯಾಂಡರ್ಡ್ ಪ್ರಕಾರ ಆಸ್ತಿಯನ್ನು ಅದರ ವಸೂಲಿ ಮೊತ್ತವು ಆಸ್ತಿಯ ಬಳಕೆ ಅಥವಾ ಮಾರಾಟದ ಮೂಲಕ ವಸೂಲಿ ಮಾಡಬೇಕಾದ ಮೊತ್ತವನ್ನು ಮೀರಿದರೆ ಅದರ ವಸೂಲಿ ಮಾಡಬಹುದಾದ ಮೊತ್ತಕ್ಕಿಂತ ಹೆಚ್ಚಿನದನ್ನು ಒಯ್ಯಲಾಗುತ್ತದೆ.

(ಇ) ಸರಕಾರದ ಕಂಪೆನಿಯಾಗಿರುವುದರಿಂದ ಭಾರತ ಸರ್ಕರದ ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ 5ನೇ ಜೂನ್ 2015ರಂದು ಹೊರಡಿಸಿದ ಜಿ.ಎಸ್.ಆರ್. 463(ಇ) ಅಧಿಸೂಚನೆ ಸಂಖ್ಯೆಗೆ ಅನುಸಾರವಾಗಿ ಕಂಪೆನಿ ಕಾಯಿದೆ 2013ರ ಸೆಕ್ಷನ್ 164ರ ಉಪವಿಭಾಗ (2) ಕಂಪೆನಿಗೆ ಅನ್ವಯಿಸುವುದಿಲ್ಲ.

(ಎಫ್) ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಹತೆ ಮೇಲಿನ ಕಂಪೆನಿಯ ಹಣಕಾಸಿನ ವರದಿ ಮತ್ತು ಇಂತಹ ನಿಯಂತ್ರಣ ಕಾರ್ಯದ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಪ್ರತ್ಯೇಕ ವರದಿಯನ್ನು ಅನುಬಂಧ 'ಎ'ನಲ್ಲಿ ನೀಡಿ. ನಮ್ಮ ವರದಿ ಕಂಪೆನಿಯ ಅರ್ಹತೆ

ಮೇಲಿನ ನಿಯಂತ್ರಣ ಕಾರ್ಯದ ಪರಿಣಾಮಕಾರಿತ್ವ ಮತ್ತು ಆಂತರಿಕ ಹಣಕಾಸು ನಿಯಂತ್ರಣಗಳ ವರದಿಯ ಬಗ್ಗೆ ಬದಲಾಯಿಸಿದ ಅಭಿಪ್ರಾಯವಾಗಿರುತ್ತದೆ.

(ಜಿ) ಲೆಕ್ಕಪರಿಶೋಧನೆಯ ವರದಿಯ ಪ್ರಕಾರ ಕಂಪೆನಿ ಕಾನೂನಿನ (ಪರಿಶೋಧನೆ ಮತ್ತು ಪರಿಶೋಧಕರು) 2014ರ ಕಂಪೆನಿ ಕಾಯಿದೆ ನಿಯಮ 11ರ ಪ್ರಕಾರ ನಮ್ಮ ಅಭಿಪ್ರಾಯ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿಚಾರಣೆಯ ಪ್ರಕಾರ.

(ಎ) ಕಂಪೆನಿಯು ತನ್ನ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಬಾಕಿ ದಾವೆಗಳನ್ನು ಹೊಂದಿಲ್ಲ.

(ಬಿ) ಕಂಪೆನಿಯು ವಸ್ತು ನಿರೀಕ್ಷಿತ ನಷ್ಟವಿರುವ ಉತ್ಪನ್ನ ಒಡಂಬಡಿಕೆಗಳು ಸೇರಿದಂತೆ ಯಾವುದೇ ದೀರ್ಘಾವಧಿಯ ಒಪ್ಪಂದಗಳನ್ನು ಹೊಂದಿಲ್ಲ.

(ಸಿ) ಕಂಪೆನಿಯು ಹೂಡಿಕೆದಾರರ ಶಿಕ್ಷಣ ನಿಧಿ ಮತ್ತು ರಕ್ಷಣಾ ನಿಧಿಗೆ ಯಾವುದೇ ಮೊತ್ತವನ್ನು ವರ್ಗಾಯಿಸುವ ಪ್ರಮೇಯವಿರುವುದಿಲ್ಲ.

ಸ್ಥಳ:–ಮಂಗಳೂರು
ದಿನಾಂಕ: 30.10.2021

ಕಾಮತ್ ಮತ್ತು ರಾವ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ
ಸಂಸ್ಥೆಯ ನೊಂದಣಿ ಸಂಖ್ಯೆ: 001689S

ಸಹಿ/–
ಶ್ರೀನಿವಾಸ ಎಸ್ ಕಾಮತ್
ಪಾಲುದಾರರು
ಸದಸ್ಯತನ ಸಂಖ್ಯೆ:201716
UDIN : 21201716AAAKN3012

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ– ಎ

2013ನೇ ಕಂಪೆನಿ ಕಾಯಿದೆಯ (ಕಾಯಿದೆ) 143ನೇ ಸೆಕ್ಷನ್‌ನ ಉಪ ಸೆಕ್ಷನ್ (3)ರ ಪರಿಚ್ಛೇಧ (1)ರ ಪ್ರಕಾರ ಆಂತರಿಕ ಆರ್ಥಿಕ ನಿಯಂತ್ರಣಗಳು

ನಾವು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ಮಾರ್ಚ್ 2021ರ ಅಂತ್ಯದವರೆಗಿನ ಪರಿಶೋಧನೆಯನ್ನು ಅದೇ ದಿನಾಂಕದ ಕಂಪೆನಿಯ ಆರ್ಥಿಕ ತಃಖ್ತೆಗಳ ಪರಿಶೋಧನೆಯ ಜೊತೆಗೆ ಮಾಡಿರುತ್ತೇವೆ.

ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ಆಡಳಿತದ ಜವಾಬ್ದಾರಿ

ಕಂಪೆನಿಯ ಆಂತರಿಕ ಆರ್ಥಿಕ ನಿಯಂತ್ರಣದ ರೂಪುರೇಷೆಯನ್ನು ತಯಾರಿಸಿ ಆರ್ಥಿಕ ನಿಯಂತ್ರಣವನ್ನು ನಿರ್ವಹಿಸುವುದು ಆಡಳಿತದ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯು 2013ನೇ ಕಾಯಿದೆಯನ್ವಯ ಕಂಪೆನಿಯ ನಿಯಮಾವಳಿಗಳನ್ನು ಪಾಲಿಸುತ್ತಾ ಅದರ ಆಸ್ತಿಗಳನ್ನು ಕಾಪಾಡುವುದು, ಅಕ್ರಮಗಳನ್ನು ಮತ್ತು ವಂಚನೆಗಳನ್ನು ಪತ್ತೆ ಹಚ್ಚುವುದು, ನಿಖರವಾದ ಮತ್ತು ಪೂರ್ಣ ಲೆಕ್ಕಪತ್ರಗಳ ದಾಖಲೆಯನ್ನಿಟ್ಟು ಸಮಾಯಾನುಸಾರ ನಂಬಿಕೆಯ ಆರ್ಥಿಕ ಮಾಹಿತಿಗಳನ್ನು ತಯಾರಿಸುವುದು ಮತ್ತು ಕಂಪೆನಿಯ ವ್ಯವಹಾರಗಳನ್ನು ಸಮಂಜಸವಾಗಿ ಮತ್ತು ಕ್ರಮಾಗತವಾಗಿ ನಿರ್ವಹಿಸುವ ಬಗ್ಗೆ ಸಾಕಷ್ಟು ಆರ್ಥಿಕ ನಿಯಂತ್ರಣಗಳನ್ನು ರೂಪಿಸುವುದು ಮತ್ತು ಅಳವಡಿಸುವುದಾಗಿರುತ್ತದೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ

